

ಅಮೃತಾ ಪ್ರೀತಮ್ ಅವರ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕೃತಿ

ಕಾಗದ ಮತ್ತು ಕ್ಯಾನ್ವಾಸ್

ಕವನ ಸಂಕಲನ

ಕನ್ನಡಕ್ಕೆ

ಡಾ. ಆರ್ ಲಕ್ಷ್ಮೀನಾರಾಯಣ

ಪ್ರೀತಿ ಗೌರವಪೂರ್ವಕವಾಗಿ

ಆರ್. ಲಕ್ಷ್ಮೀನಾರಾಯಣ

ಡಾ. ಆರ್. ಲಕ್ಷ್ಮೀನಾರಾಯಣ

ಓ. ಆರ್. ರಾಮಣ್ಣ, ಪುಟ್ಟಮ್ಮ ದಂಪತಿಗಳ ಮಗನಾದ ಡಾ. ಆರ್. ಲಕ್ಷ್ಮೀನಾರಾಯಣ ಅವರು (ಜನನ: 2-12-1949) ತುಮಕೂರಿನವರು. 1971ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ. ಎ ಮುಗಿಸಿದ ಮೇಲೆ 1971 ರಿಂದ 2006ರವರೆಗೆ ಕಾಲೇಜು ಶಿಕ್ಷಣ ಇಲಾಖೆಯ ವಿವಿಧ ಸರ್ಕಾರಿ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕ, ಪ್ರಾಧ್ಯಾಪಕ ಮತ್ತು ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿ, 2006 ಮೇ ಯಿಂದ 2007ರಡಿಸೆಂಬರ್ ವರೆಗೆ ಧಾರವಾಡದಲ್ಲಿ ಇಲಾಖೆಯ ಜಂಟಿ ನಿರ್ದೇಶಕರಾಗಿ ಸೇವೆ ಸಲ್ಲಿಸಿ 2007ರ ಲ್ಲಿ ನಿವೃತ್ತರು. ಡಾ. ಪಿ. ವಿ ನಾರಾಯಣ ಅವರ ಮಾರ್ಗದರ್ಶನದಲ್ಲಿ 2004ರಲ್ಲಿ 'ವಕ್ರೋಕ್ತಿ ಜೀವಿತ- ಒಂದು ಅಧ್ಯಯನ' ಎಂಬ ಮಹಾ ಪ್ರಬಂಧಕ್ಕೆ ಬೆಂಗಳೂರು ವಿಶ್ವ ವಿದ್ಯಾಲಯದ ಪಿಎಚ್. ಡಿ ಪದವಿ. ಇಂಗ್ಲಿಷ್ ಮತ್ತು ಹಿಂದಿಯಿಂದ ಅನುವಾದ ಮಾಡುವುದರಲ್ಲಿ ನಿರತರು.

ಪ್ರಕಟಿತ ಕೃತಿಗಳು: ವಿಮರ್ಶೆ: 'ಮಾಸ್ತಿ', (ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಣೆ) ಆಹ್ಲಾದ, 'ಎಸ್. ವಿ. ಪರಮೇಶ್ವರ ಭಟ್ಟ' (ಕೇಂದ್ರ ಸಾಹಿತ್ಯ ಅಕಡೆಮಿ ಪ್ರಕಟಣೆ), ಚೆಲುವಿನ ನೆಲೆಗಳ ಹಾದಿಯಲ್ಲಿ (ಸಿ. ವಿ. ಜಿ ಪ್ರಕಾಶನ) ವಕ್ರೋಕ್ತಿ ಜೀವಿತ-ಒಂದು ಅಧ್ಯಯನ, ಉರಿಲಿಂಗ ಪೆದ್ದಿ (ಮೈ. ವಿ. ವಿ), ಒಳತಿರುಳು (ವಿಮರ್ಶಾ ಕೃತಿ)

ಅನುವಾದಿತ ಪುಸ್ತಕಗಳು: 'ಚಿನ್ನದ ಕಳಶ, (ಚೀಣಾದ ಜನಪದ ಕಥೆಗಳ ಸಂಕಲನ) 'ಬರ್ಟೋಲ್ಟ್ ಬ್ರೆಕ್ಟ್' (ಇಂಗ್ಲಿಷ್ ನಿಂದ), ವಾಙ್ಮಯ ವಿವೇಕ (ಕಾವ್ಯ ಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಯ ಅನುವಾದಿತ ಲೇಖನಗಳು), 'ಇನ್ನೊಬ್ಬ ದ್ರೋಣಾಚಾರ್ಯ' (ಹೆಸರಾಂತ ಹಿಂದೀ ನಾಟಕದ ಕನ್ನಡ ಅನುವಾದ), ಅಮೃತಾ ಪ್ರೀತಂ ಅವರ ಆಯ್ದ ಕಥೆಗಳು, ಕನ್ನಡ ವಕ್ರೋಕ್ತಿ ಜೀವಿತ, (ಸಂಸ್ಕೃತ ವಕ್ರೋಕ್ತಿ ಜೀವಿತದ ಕನ್ನಡ ರೂಪ) ಬೇಗುದಿ (ಕಿರಣ್ ನಗರ್ ಕರ್ ಅವರ ಪ್ರಶಸ್ತಿ ಪುರಸ್ಕೃತ 'ಕಕೋಲ್ಡ್ 'ಕಾದಂಬರಿಯ ಕನ್ನಡ ರೂಪ), ಅನುರೂಪ (ಪ್ರಸಿದ್ಧ ಅನುವಾದಿತ ಕವಿತೆಗಳ ಸಂಕಲನ), ವಕ್ರೋಕ್ತಿ ಮತ್ತು ಶೈಲಿಶಾಸ್ತ್ರದ

ಪರಿಕಲ್ಪನೆಗಳು (ಇಂಗ್ಲಿಷ್ ನಿಂದ), ಬದುಕಿನ ಇನ್ನೊಂದು ಹಾದಿ (ಡಾ ಆರ್. ಎಲ್ ಕಪೂರರ ಇಂಗ್ಲಿಷ್ ಪುಸ್ತಕದ ಅನುವಾದ)

ಪಾಲಿ-ಕನ್ನಡ ಪದಕೋಶ (ಡಾ. ಅಂಬೇಡ್ಕರ್ ಅವರ ಮೂಲ ಇಂಗ್ಲಿಷ್ ಕೃತಿಯ ಕನ್ನಡ ಅಳವಡಿಕೆ), ಪ್ರಾಕೃತ-ಕನ್ನಡ ಬೃಹತ್ ನಿಘಂಟು (ಪ್ರಾಕೃತ ಪಾಇಅ-ಸದ್ದ-ಮಹಣ್ಣವೋದ 1200 ಪುಟಗಳ ನಿಘಂಟಿನ ಕನ್ನಡ ಅಳವಡಿಕೆ)

ಸಂಪಾದಿತ ಕೃತಿಗಳು: 'ರುದ್ರಭಟ್ಟ' (ಜಗನ್ನಾಥ ವಿಜಯ ಸಂಗ್ರಹ), ಎಂ. ವಿ.ಸೀ ಸಮಗ್ರ ಸಾಹಿತ್ಯ ಸಂಪುಟ-4(ಭಾಗ-1 ಮತ್ತು 2), ಹೊಸಗನ್ನಡ ಕಾವ್ಯ ಸಂಗ್ರಹ

ಪ್ರಶಸ್ತಿಗಳು: 'ಕನ್ನಡ ವಕ್ರೋಕ್ತಿ ಜೀವಿತ' ಕೃತಿಗೆ 2007ರ ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿ, ಅದೇ ಕೃತಿಗೆ 2004ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಬೇಗುದಿ' ಕೃತಿಗೆ 2013ರ ಕರ್ನಾಟಕ ಸಾಹಿತ್ಯ ಅಕಡೆಮಿ ಪ್ರಶಸ್ತಿ.

'ಆಹ್ಲಾದ' ಕೃತಿಗೆ ಗೊರೂರು ಸಾಹಿತ್ಯ ಪ್ರಶಸ್ತಿ

2000 ದಲ್ಲಿ ರಾಜ್ಯ ಸರ್ಕಾರದಿಂದ ಉತ್ತಮ ಕಾಲೇಜು ಶಿಕ್ಷಕ ಪ್ರಶಸ್ತಿ.

ಅಮೃತಾ ಪ್ರೀತಮ್ ಅವರ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕೃತಿ

ಕಾಗದ ಮತ್ತು ಕ್ಯಾನ್‌ವಾಸ್

ಮೂಲ: ಅಮೃತಾ ಪ್ರೀತಮ್

ಕನ್ನಡಕ್ಕೆ: ಡಾ. ಆರ್. ಲಕ್ಷ್ಮೀನಾರಾಯಣ

ಭಾವಯಿತ್ರೀ ಪ್ರಕಾಶನ

12, ಶ್ರೀನಿಕೇತನ, 2ನೇ ಕ್ರಾಸ್, ಶಿವಾನಂದ ನಗರ
ಮೂಡಲಪಾಳ್ಯ, ಬೆಂಗಳೂರು–560072
ಮೊ: 9449028996

KAGADA MATTU CANVAS
Kannada Translation of Amrita Pritam's Jnanapith Award winning collection of Punjabi Poems 'Kagaz Aur Canvas' by : Dr. R. Lakshminarayana

Mob: 9449028996
e-mail: raalanaa@gmail.com

Publishers:

Bhavayithri Prakashana
12, Sriniketana, 2nd Cross, Shivanada Nagar
Moodalpalya, Bengaluru-560072
Mob: 9449028996

First Edition : 2019
Size: 1/8 Crown
Pages : 96
Paper Used: 70 GSM NS Maplitho
Copies: 800
Price : 75/-
Cover Design : Arun Kumar G.

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು–೧೮
ದೂರವಾಣಿ: ೨೬೬೧೩೧೨೩, ೨೬೬೧೮೭೫೨

ಪ್ರೊ. ಬಿ.ವೈ. ಲಲಿತಾಂಬ ಅವರಿಗೆ
ಗೌರವಪೂರ್ವಕವಾಗಿ

KAGADA MATTU CANVAS
Kannada Translation of [illegible]
Award winning collection of Punjabi Poetry 'Kagaz Aur Canvas' by : Dr. R. [illegible]
Mob: [illegible]
email: [illegible]@gmail.com

Publishers:

[illegible] Prakashana
[illegible]
[illegible], Bengaluru - [illegible]
Mob: [illegible]

First Edition : 201[illegible]
Size: 1/8 Crown
Pages : 96
Paper Used: 70 GSM NS Maplitho
Copies: 800
Price : 75/-
Cover Design : Arun Kumar G.

ನನ್ನ ನುಡಿ

ಗದ್ಯವೇ ನನ್ನ ಅಭಿವ್ಯಕ್ತಿಯ ಮಾಧ್ಯಮವಾದರೂ ಕಾವ್ಯ ಯಾವತ್ತೂ ನನ್ನ ಆಸಕ್ತಿಯ ಹಾಗೂ ಆಕರ್ಷಣೆಯ ಕ್ಷೇತ್ರವಾಗಿದೆ. ಪ್ರಖ್ಯಾತ ಕವಿಗಳ ಪ್ರಖ್ಯಾತ ಕವನಗಳನ್ನು ಅನುವಾದಿಸುವ ಮೂಲಕ ಕಾವ್ಯದ ಬಗೆಗಿನ ನನ್ನ ಅನುರಕ್ತಿಯನ್ನು ಜತನದಿಂದ ಕಾಪಿಟ್ಟುಕೊಳ್ಳುವ ಪ್ರಯತ್ನ ಮಾಡುತ್ತ ಬಂದಿದ್ದೇನೆ. ಈ ಹಿಂದೆ 2006 ರಲ್ಲಿ ಸೀತಾಕಾಂತ ಮಹಾಪಾತ್ರ, ಶಿವ್ ಕೆ. ಕುಮಾರ್, ಕಮಲಾದಾಸ್, ಹೋಚಿಮಿನ್, ಗೋಪಾಲ್ ಹೊನ್ನಲಗೆರೆ, ಅಮೃತಾ ಪ್ರೀತಮ್, ಸರೋಜಿನೀ ನಾಯಿಡು ಮೊದಲಾದ ಭಾರತೀಯ ಕವಿಗಳ ಮತ್ತು ಗೇಬ್ರಿಯಲ್ ಒಕಾರಾ, ವೋಲೆ ಸೋಯಿಂಕಾ, ಚಿನುಅ ಅಚಿಬೆ, ಬರ್ನಾರ್ಡ್ ಡ್ಯಾಡಿ ಮುಂತಾದ ಕೆಲ ಆಫ್ರಿಕನ್ ಕವಿಗಳ ಅನುವಾದಿತ ಕವನಗಳ ಸಂಕಲನವೊಂದನ್ನು 'ಅನುರೂಪ' ಎಂಬ ಹೆಸರಿನಲ್ಲಿ ತಂದು ನನ್ನ ಆಸೆಯನ್ನು ಈಡೇರಿಸಿಕೊಂಡಿದ್ದೆ. ಅದರಲ್ಲಿ ಅಮೃತಾ ಪ್ರೀತಮ್ ಅವರ 13 ಕವನಗಳೂ ಸೇರಿವೆ. ಮುಂದೆ ಅಮೃತಾ ಪ್ರೀತಮ್ ಅವರ ಆಯ್ದ ಕಥೆಗಳ ಸಂಕಲನವೊಂದನ್ನು ತಂದ ಮೇಲೆ ಅವರ ಜ್ಞಾನಪೀಠ ಪುರಸ್ಕೃತ ಕವನ ಸಂಕಲನ 'ಕಾಗಜ್ ಔರ್ ಕ್ಯಾನ್ ವಾಸ್' ಅನ್ನು ಏಕೆ ಅನುವಾದಿಸಬಾರದೆಂದು ಅಂದುಕೊಂಡದ್ದರ ಫಲವೇ ಪ್ರಸ್ತುತ ಕೃತಿ.

ಇದರ ಹಿಂದೀ ಅನುವಾದ ಮತ್ತು ದೇವನಾಗರಿ ಲಿಪಿಯಲ್ಲಿರುವ ಇದರ ಪಂಜಾಬಿ ಮೂಲ ಕವನಗಳನ್ನು ಆಧರಿಸಿ ಈ ಅನುವಾದವನ್ನು ಸಿದ್ಧಪಡಿಸಲಾಗಿದೆ. ಪಂಜಾಬಿ ಭಾಷೆಗೂ ಹಿಂದೀ ಭಾಷೆಗೂ ಅತ್ಯಂತ ಹತ್ತಿರದ ಹೋಲಿಕೆಗಳಿವೆ. ಶಬ್ದ ಭಂಡಾರವಂತೂ ಎರಡೂ ಭಾಷೆಗಳಿಗೆ ಒಂದೇ ಎಂಬಷ್ಟು

ಸಾಮ್ಯವಿದೆ. ಕೆಲವು ಪ್ರತ್ಯಯಗಳು ಮಾತ್ರ ಬದಲಾವಣೆ ಅಷ್ಟೆ. ಹಿಂದಿಂಯಲ್ಲಿ ಬೇರೆ ಶಬ್ದವಿದ್ದಾಗ ಪಂಜಾಬಿ ಮಾತೃಭಾಷೆಯವರೊಂದಿಗೆ ಸಮಾಲೋಚಿಸಿ ಸರಿಯಾದ ಅರ್ಥ ತಿಳಿದುಕೊಂಡು ಸಾಧ್ಯವಾದಷ್ಟೂ ಮೂಲಕ್ಕೆ ನಿಕಟವಾಗಿ ಅನುವಾದಿಸಲು ಯತ್ನಿಸಿದ್ದೇನೆ. ಇದರ ಬಗ್ಗೆ ಓದುಗರೇ ತೀರ್ಮಾನಿಸಬೇಕು.

ಇದನ್ನು ಕನ್ನಡಕ್ಕೆ ಅನುವಾದಿಸಲು ಅನುಮತಿ ನೀಡಿದ ಅಮೃತಾ ಪ್ರೀತಮ್ ಅವರ ಮೊಮ್ಮಗ ಅಮನ್ ಖತ್ರ ಅವರಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ. ಇದರ ಪ್ರಕಟಣೆಗೆ ನೆರವು ನೀಡಿದ್ದರ ಜೊತಗೆ ಇದಕ್ಕೊಂದು ಅರ್ಥಪೂರ್ಣವಾದ ಬೆನ್ನುಡಿಯನ್ನು ಬರೆದು ಕೊಟ್ಟಿರುವ ನನ್ನ ಆತ್ಮೀಯ ಶಿಷ್ಯಮಿತ್ರ ಡಾ. ಮಹೇಶ್ ಕುಮಾರ್ ಅವರಿಗೆ ಹಾಗೂ ಇದನ್ನು ಅಂದವಾಗಿ ಮುದ್ರಿಸಿಕೊಟ್ಟಿರುವ ಲಕ್ಷ್ಮೀ ಮುದ್ರಣಾಲಯದವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

– ಆರ್ ಲಕ್ಷ್ಮೀನಾರಾಯಣ

ಅಮೃತಾ ಪ್ರೀತಮ್:

ವ್ಯಕ್ತಿ ಮತ್ತು ಕಾವ್ಯ-ಒಂದು ನೋಟ

ಏಳು ದಶಕಗಳ ಕಾಲ ಪಂಜಾಬಿ ಭಾಷಾ ಸಾಹಿತ್ಯಗಳನ್ನು ತಮ್ಮ ಅಮರ ಕೃತಿಗಳಿಂದ ಶ್ರೀಮಂತಗೊಳಿಸಿದ ಅಮೃತಾ ಪ್ರೀತಮ್(1919-2005) ಅವಿಭಜಿತ ಭಾರತದ ಪಂಜಾಬ್‌ನ ಗುಜರನ್‌ವಾಲಾದಲ್ಲಿ ಹುಟ್ಟಿದವರು.

ಚಿಕ್ಕ ವಯಸ್ಸಿನಲ್ಲೇ ಬರವಣಿಗೆ ಪ್ರಾರಂಭಿಸಿ 11ನೇ ವಯಸ್ಸಿನಲ್ಲಿ ಮೊದಲ ಕವನ ಸಂಕಲನ ಪ್ರಕಟಿಸಿದವರು. 1947ರಲ್ಲಿ ದೆಹಲಿಗೆ ಬಂದು ನೆಲೆಸಿದರು. ಕವಯಿತ್ರಿ, ಕಾದಂಬರಿಗಾರ್ತಿ, ಕಥೆಗಾರ್ತಿ, ಪ್ರಬಂಧಕಾರ್ತಿ ಮತ್ತು ಪತ್ರಕರ್ತೆ ಕೂಡ ಆಗಿದ್ದರು. ಹದಿನೆಂಟು ಕವನ ಸಂಗ್ರಹಗಳು, 28 ಕಾದಂಬರಿಗಳು, ಹಾಗೂ 5 ಕಥಾಸಂಕಲನಗಳೂ ಸೇರಿದಂತೆ ಒಟ್ಟು 75 ಕೃತಿಗಳನ್ನು ರಚಿಸುವ ಮೂಲಕ ಪಂಜಾಬಿ ಸಾಹಿತ್ಯದಲ್ಲಿ ದೊಡ್ಡ ಹೆಸರು ಮಾಡಿದವರು. ಭಾರತದ ಬಹುತೇಕ ಎಲ್ಲ ಭಾಷೆಗಳಿಗೆ ಅವರ ಕೃತಿಗಳು ಅನುವಾದವಾಗಿರುವುದಲ್ಲದೆ ಇಂಗ್ಲಿಷ್, ರಷ್ಯನ್, ಫ್ರೆಂಚ್, ಪೋಲಿಷ್ ಮತ್ತು ಬಲ್ಗೇರಿಯನ್ ಮುಂತಾದ ವಿದೇಶೀ ಭಾಷೆಗಳಿಗೂ ಅನುವಾದವಾಗಿ ಅಂತಾರಾಷ್ಟ್ರೀಯ ಪ್ರಸಿದ್ಧಿಯನ್ನು ಅವರಿಗೆ ತಂದುಕೊಟ್ಟಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ('ಸುನಹಡೆ' ಕವನ ಸಂಕಲನಕ್ಕೆ) ಪದ್ಮಶ್ರೀ ಪ್ರಶಸ್ತಿ, ಎರಡೆರಡು ವಿಶ್ವವಿದ್ಯಾಲಯಗಳ ಡಿ.ಲಿಟ್ ಪ್ರಶಸ್ತಿಗಳಲ್ಲದೆ 'ಕಾಗಜ್ ಕೆ ಕ್ಯಾನ್ ವಾಸ್' ಎಂಬ ತಮ್ಮ ಕವನ ಸಂಕಲನಕ್ಕೆ ಅತ್ಯುನ್ನತ ಸಾಹಿತ್ಯ ಪ್ರಶಸ್ತಿಯಾದ ಭಾರತೀಯ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದವರು(1981). ಪಂಜಾಬಿ ಭಾಷೆಗೆ ಮೊದಲ ಜ್ಞಾನಪೀಠ

ಪ್ರಶಸ್ತಿಯನ್ನು ದೊರಕಿಸಿಕೊಟ್ಟ ಗರಿಮೆಯೂ ಅವರದೇ. ಬರಹದಲ್ಲೆಂತೋ ಅಂತೆ ಜೀವನದಲ್ಲೂ ಅತ್ಯಂತ ದಿಟ್ಟತನ ತೋರಿದವರು. ಅತ್ಯಂತ ಚಿಕ್ಕ ವಯಸ್ಸಿನಲ್ಲೇ ಹಿರಿಯರು ನಿರ್ಧರಿಸಿದಂತೆ ಪ್ರೀತಮ್ ಸಿಂಗ್ ಅವರನ್ನು ಮದುವೆಯಾಗಿ ಅಮೃತಾ ಪ್ರೀತಮ್ ಆದರೂ ಮುಂದೆ ಆ ಸಂಬಂಧಕ್ಕೆ ವಿದಾಯ ಹೇಳಿ ಚಿತ್ರಕಾರ ಇಮ್ರೋಜ್ ಅವರೊಂದಿಗೆ ಜೀವನದ ಕೊನೆಯ ತನಕ ಜೊತೆಗೂಡಿ ಬದುಕಿದರು.

ಭಾರತದ ಪ್ರಮುಖ ಭಾಷೆಗಳಲ್ಲಿ ಒಂದಾದ ಪಂಜಾಬಿ ಭಾಷೆ ತನ್ನದೇ ಆದ ಜೀವಂತ ಕಾವ್ಯ ಪರಂಪರೆಯನ್ನು ಹೊಂದಿದೆ. ಪಂಜಾಬಿನ ಜನಪದಗೀತೆಗಳು ಈ ಪರಂಪರೆಯ ಪ್ರಮುಖ ಭಾಗವಾಗಿವೆ. ನಾನಾ ಬಗೆಯ ಜನಪ್ರಿಯ ಛಂದಸ್ಸುಗಳಲ್ಲಿ ರಚಿತವಾದ ಪಂಜಾಬಿ' ಕಿಸ್ಸಾ'(ಕಥಾ) ಕಾವ್ಯವು ಪ್ರೇಮಕಥೆಗಳನ್ನು ಕಾವ್ಯದಲ್ಲಿ ಅಭಿವ್ಯಕ್ತಿಸುತ್ತದೆ.

19ನೇ ಶತವಮಾನದಲ್ಲಿ ಪಂಜಾಬಿ ಕಾವ್ಯದ ದೃಷ್ಟಿ ರೋಮ್ಯಾಂಟಿಕ್ ಮತ್ತು ಧಾರ್ಮಿಕ ವಿಷಯಗಳ ಮೇಲೆ ನಟ್ಟಿತ್ತಾದರೆ 20ನೇ ಶತಮಾನದಲ್ಲಿ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಉಂಟಾದ ನವ ಜಾಗೃತಿಯ ಪರಿಣಾಮವಾಗಿ ಪ್ರಜಾಪ್ರಭುತ್ವದ ವಿಚಾರಗಳು, ದೇಶ ಪ್ರೇಮದ ಭಾವನೆಗಳು, ಮಾತೃಭಾಷೆ ಮತ್ತು ಮಾತೃಭೂಮಿಯ ಬಗೆಗಿನ ಪ್ರೀತಿ, ಗಂಡು-ಹೆಣ್ಣಿನ ನಡುವಣ ಸಮಾನತೆ ಕಾವ್ಯದಲ್ಲಿ ಮೇಲುಗೈ ಪಡೆದುಕೊಂಡವು. ಜಲಿಯನ್ವಾಲಾ ಬಾಗ್ ಹತ್ಯಾಕಾಂಡದ ನಂತರದಲ್ಲಿ ದೇಶ ಪ್ರೇಮದ ಭಾವನೆಗಳು ಪ್ರವಾಹದ ರೂಪದಲ್ಲಿ ಹರಿದುವು.

1947ರಲ್ಲಾದ ದೇಶ ವಿಭಜನೆಯ ದುರಂತದ ಕುರಿತಾಗಿ, ಆ ಸಮಯದ ರಕ್ತಪಾತದ, ಉನ್ಮಾದದ, ಅಮಾನುಷ ಕೃತ್ಯಗಳ ಕುರಿತಾಗಿ ಕವಿಗಳು ಹೃದಯಸ್ಪರ್ಶಿಯಾಗಿ ಬರೆದರು. ಪಂಜಾಬಿಯ

ಪ್ರಸಿದ್ಧ ಪ್ರೇಮಕಾವ್ಯವಾದ 'ಹೀರಾರಂಜಾನ' ದ ಕರ್ತೃವಾದ 'ವಾರಿಸ್ ಶಾ' ರವರನ್ನು ಸಂಬೋಧಿಸಿ ಅಮೃತಾ ಪ್ರೀತಂ ಸುದೀರ್ಘ ಚರಮಗೀತೆ ರಚಿಸಿದ್ದಾರೆ. ಅದರಲ್ಲಿ ತನ್ನ ನೋವುಂಡ ಆತ್ಮದ ನೋವು, ಯಾತನೆಗಳನ್ನು ಬಿಚ್ಚಿಟ್ಟಿದ್ದಾರೆ. ತಮ್ಮ ಪ್ರಮುಖ ಕವನ 'ಮಜಬೂರ್' ನಲ್ಲಿ ಅಪಹೃತ ಮಹಿಳೆಯ ವಿವಾಹದ ಬಂಧನದಾಚೆ ಹುಟ್ಟಿದ ಮಗನು ತನ್ನ ಜುಗುಪ್ಸೆ ಮತ್ತು ಅಳಲು ತೋಡಿಕೊಂಡಿರುವ ರೀತಿ ನಮ್ಮ ಹೃದಯವನ್ನು ಹಿಂಡುತ್ತದೆ-

ನನ್ನ ತಾಯಿಂಯ ದೇಹದೊಂದಿಗೆ ಅನವರತವೂ ದೂಷಣೆಗೊಳಗಾಗಿರುವ

ಗಾಯದ ಒಂದು ಕಲೆ ನಾನು
ಅನೈಚ್ಛಿಕವಾಗಿ ನನ್ನ ತಾಯಿಯು ತಿಂಗಳುಗಟ್ಟಲೆ ಹೊತ್ತ
ಅಮಾನವೀಯತೆಯ ಭಾರ ನಾನು[1]

ಮುಂದೆ ಬಂದ ರೋಮ್ಯಾಂಟಿಕ್ ಕಾವ್ಯದಲ್ಲಿ ಕವಿಗಳು ಹಳೆಯ ಮೌಲ್ಯಗಳ ಕಟ್ಟುಪಾಡುಗಳಿಂದ ಹೊರಬಂದು ಮಧ್ಯಮ ವರ್ಗದ ಜನರ ಅನುಭವಗಳಿಗೆ ಅಭಿವ್ಯಕ್ತಿ ನೀಡಿದರು. ಇದರಲ್ಲಿ ಮೋಹನ್ ಸಿಂಘ್, ಪ್ರಭ್ಜೋತ್ ಕೌರ್ ಜೊತೆ ಅಮೃತಾಪ್ರೀತಮ್ ದನಿಯೂ ಕೂಡ ಗಟ್ಟಿಯಾಗಿಯೇ ಕೇಳಿಬರುತ್ತದೆ. ಪ್ರೇಮಭಾವನೆ ವ್ಯಕ್ತಿಜೀವನದ ಮೂಲಭಾವನೆ ಎಂದು ಬಗೆದು ಅದನ್ನೇ ತಮ್ಮ ಕಾವ್ಯದ ಮುಖ್ಯ ಸಾಧನವಾಗಿ ಅಮೃತಾ ಬಳಸುತ್ತಾರೆ. ತಮ್ಮ ಪ್ರೇಮಕಾವ್ಯದಲ್ಲಿ ಪಂಜಾಬಿ ಜನಪದ ಕಾವ್ಯ, ಚೇತನ, ಸಹಜತೆ ಹಾಗೂ ಲಯವನ್ನು ಸೆರೆಹಿಡಿದಿದ್ದಾರೆ(ಪು412).

ಅಸಹನೀಯ ವಿರಹದ ಒರಳಿನಲ್ಲಿ
ಬದುಕಿನ ಅದಿರನ್ನು ನಾನು ರುಬ್ಬುತ್ತೇನೆ
ಪ್ರತಿ ರಾತ್ರಿಯೂ ಆಕಾಶ
ಅದರ ಒಂದು ಚೂರನ್ನು ಕೇಳುತ್ತದೆ.[2]

ಅವರ ಬಹುಪಾಲು ಕವನಗಳು ಪ್ರೇಮದ ತೀವ್ರತೆಯನ್ನು, ಹತಾಶೆಯನ್ನು ಅಗಾಧತೆಯನ್ನು ಕುರಿತ ಕವನಗಳೇ ಆಗಿವೆ. ಸಮಾಜವಾದಿ ವಾಸ್ತವವಾದದ ಪ್ರಭಾವಕ್ಕೆ ಒಳಗಾದ ಪಂಜಾಬಿ ಕವಿಗಳು ಪ್ರಗತಿಶೀಲ ಕಾವ್ಯದತ್ತ ಮುಖಮಾಡಿದರು. ಊಳಿಗಮಾನ್ಯ ಪದ್ಧತಿಯ ಮೌಲ್ಯಗಳ ವಿರುದ್ಧ , ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ದನಿ ಎತ್ತಿ ಜನಸಾಮಾನ್ಯರಲ್ಲಿ ಜಾಗೃತಿ ತರುವ ಕೆಲಸವನ್ನು ಕವಿಗಳು ತಮ್ಮ ಕಾವ್ಯದಲ್ಲಿ ಮಾಡಿದರು. ಪರಂಪರಾಗತ ವಿಷಯ ವಸ್ತುಗಳು ಹಿಂದೆ ಸರಿದು ಹೊಸ ವಸ್ತು. ವಿಷಯಗಳು ಕಾವ್ಯದಲ್ಲಿ ಎಡೆ ಪಡೆದುವು. ಅಮೃತಾ ಅವರ ಕಾವ್ಯವಂತೂ ರೂಪಕ, ಪ್ರತಿಮೆ, ಪ್ರತೀಕ ಸಂಕೇತಗಳಿಂದ ಇಡಿಕಿರಿದ ಕಾವ್ಯ. ಪ್ರೇಮದ ಕುದುರೆ, ಕತ್ತಲೆಗೆ ಹೊಟ್ಟೆನೋವು, ಇತಿಹಾಸ ಮರದ ಕೆಳಗೆ ನಿಂತು ಸಿಗರೇಟು ಸೇದುವ, ಚಾಪೆಯಂತೆ ಬಿಚ್ಚಿಕೊಳ್ಳುವ ಕಾಯ ಇತ್ಯಾದಿ.

ಬದುಕಿನಲ್ಲಿ ಮತ್ತು ಕಾವ್ಯ ರಚನೆಯ ನಡುವೆ ವ್ಯತ್ಯಾಸದ ಗೆರೆ ಇರದಂತೆ ಕಾವ್ಯ ರಚಿಸಿದರು ಅಮೃತಾ. ಅರ್ಥಾತ್ ತಮ್ಮ ಬದುಕನ್ನೇ ಕಾವ್ಯವಾಗಿಸಿದರು. ಅವರ ಕಾವ್ಯ ಅತ್ಯಂತ ಪಾರದರ್ಶಕವಾದ ಕಾವ್ಯ. ಅದರೊಂದಿಗೆ ಅನುಸಂಧಾನ ಮಾಡುವುದೆಂದರೆ ನಮ್ಮನ್ನೇ ನಾವು ಹೊಸ ರೀತಿಯಲ್ಲಿ ಗುರುತಿಸಿಕೊಂಡಂತೆ; ಜೀವನ ಮತ್ತು ಜಗತ್ತಿನ ಪ್ರಾಣ ಸ್ಪಂದನದೊಂದಿಗೆ, ಮನುಷ್ಯ ಹೃದಯದ ಮಿಡಿತದೊಂದಿಗೆ ಗುರುತಿಸಿಕೊಳ್ಳುವುದೆಂದೇ ಅರ್ಥ.

ಅಮೃತಾ ಅವರ ಕೃತಿಗಳಲ್ಲಿ ಸಮಾಜ ಮತ್ತು ಕುಟುಂಬದ ಶೋಷಣೆಗೆ ಸಿಕ್ಕಿ ನಲುಗಿದ ನಾರಿಯ ಚಿತ್ರಣವಿರುತ್ತದೆ. ಮುಖ್ಯವಾಗಿ ಅಮೃತಾರ ಕೃತಿಗಳು ಶೋಧನೆಗೆ ತೊಡಗುವುದು ಮನುಷ್ಯ ಸಂಬಂಧಗಳನ್ನು ಕುರಿತಂತೆ. ಮಹಿಳಾ ವಿಮೋಚನೆ ಕುರಿತು ವ್ಯಾಮೋಹಿಯಂತೆ ಬರೆಯುವ ಲೇಖಕಿ ಗಂಡು ಹೆಣ್ಣು

ಸಮಾನತೆಯು ನೆಲೆಯಲ್ಲಿ ಗುರುತಿಸಿಕೊಳ್ಳಬೇಕೆಂದು ಪ್ರತಿಪಾದಿಸಿದವರು.

ಪುರುಷರ ಕೈಯಲ್ಲಿ ಹೆಂಗಸರು ಪಡುವ ಕಷ್ಟ ಕೋಟಲೆಯನ್ನು ಇನ್ನಿಲ್ಲದಂತೆ ವರ್ಣಿಸುತ್ತಾರೆ. ಗಂಡಸರು ಸಮಾಜದ ವ್ಯವಸ್ಥೆಯನ್ನು ತಮಗೆ ಅನುಕೂಲವಾಗಿ ಮಾಡಿಕೊಂಡು ಹೆಂಗಸರನ್ನು ತುಳಿದಿದ್ದಾರೆ. 'ಪತ್ಥರ್ ಗೀತ' (ಶಿಲಾಗೀತ), ಲಾಮ್ಹಾನ್ ವತಾನ್' (ದೀರ್ಘ ದೂರಗಳು) ಕೃತಿಗಳಲ್ಲಿ ಅವರು ಮಹಿಳೆಯರ ಶೋಷಣೆ ಮಾಡುವ ಸಮಾಜದ ವಿರುದ್ಧ ಕೂಗೆಬ್ಬಿಸುತ್ತಾರೆ. ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ತಮ್ಮ ತಿರಸ್ಕಾರವನ್ನು ತೋರ್ಪಡಿಸಿ ಹೆಂಗಸರನ್ನು ಯಾರೂ ಶೋಷಿಸಬಾರದೆಂದು ಹಾಗೂ ರೈತಾಪಿ ಜನರನ್ನು ಯಾರೂ ಲೂಟಿಮಾಡಬಾರದೆಂದು ಕರೆಕೊಡುತ್ತಾರೆ.

ತಮ್ಮ ನೀತಿಪರ ಪದ್ಯಗಳಲ್ಲಿ ಮಾನವ ಸದ್ಗುಣಗಳ ಬಗ್ಗೆ ಒತ್ತಿ ಹೇಳುತ್ತಾರೆ. ಹಿಂದೆ ಅವರು ಭಾರತ ಸ್ವಾತಂತ್ರ್ಯ ಚಳುವಳಿ, ರಾಷ್ಟ್ರೀಯ ವಸ್ತುಗಳ ಬಗ್ಗೆ ಬರೆದಿದ್ದರು. ಆದರೆ ಈಗ ಅವರು ಜನರ ಜೀವನದಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಬಲಗಳ ಪ್ರಾಮುಖ್ಯದಂಥ ಸೂಕ್ಷ್ಮ ವಿಷಯಗಳ ಕಡೆಗೆ ಜನರ ಗಮನ ಸೆಳೆಯುತ್ತಾರೆ. ಸಮಾನತೆ ಸ್ವಾತಂತ್ರ್ಯ ಹಾಗೂ ಆರ್ಥಿಕ ಅವಕಾಶಗಳ ಸಮಾಜವಾದದ ಧ್ಯೇಯಗಳನ್ನು ಅಂಗೀಕರಿಸಿ ಅವನ್ನು ಪ್ರಚಾರ ಮಾಡುತ್ತಾರೆ. ಇಷ್ಟಾಗಿಯೂ ರೋಮ್ಯಾಂಟಿಕ್ ಕಾವ್ಯದ ಸಂವೇದನ ಶಕ್ತಿಯಿಂದ ತಮ್ಮನ್ನು ತಾವೇ ಮುಕ್ತಗೊಳಿಸಿಕೊಳ್ಳಲು ಶಕ್ತರಾಗಿಲ್ಲ. ಹೀಗಾಗಿ ಅವರ ಕೃತಿಗಳು ಪ್ರಗತಿಶೀಲ ಚಳುವಳಿಯ ಮೂಲ ಕ್ರಾಂತಿಕಾರಿ ಸ್ವರೂಪವನ್ನು ಮುಟ್ಟುವುದಿಲ್ಲ ಎಂಬ ಮಾತಿದೆ.

ಪಂಜಾಬಿ ಕವಿತೆಗೆ ತನ್ನದೇ ಆದ ವಿಶಿಷ್ಟ ಅಸ್ಮಿತೆ ಇದೆ. ತನ್ನದೇ ಆದ ಶಕ್ತಿ, ಸೌಂದರ್ಯವಿದೆ. ಅಮೃತಾ ಅದರ ಶ್ರೇಷ್ಠ

ಪ್ರತಿನಿಧಿ. ಯುಗದ ಸ್ಪಂದನ, ಮನುಷ್ಯ ಸ್ವಭಾವದ ಅರ್ಥದ ಹುಡುಕಾಟ, ವರ್ತಮಾನದ ಬೆಳಕಿಂಡಿಗಳು ಮತ್ತು ಅಂಧಕಾರದ ಅಗಾಧ ಕಂದರ, ಹೆಣ್ಣಿನ ಅಂತರಂಗದ ಅನುಭೂತಿಗಳ ಇದುವರೆಗೆ ಸ್ಪರ್ಶಿಸದ ಪ್ರತಿಬಿಂಬ, ನೋವಿನ ಬೆಟ್ಟಗಳಲ್ಲಿ ಹಾದಿಮಾಡಿಕೊಳ್ಳುತ್ತ ಸಾಗುವ ಕರುಣೆಯ ನಿರ್ಝರಿ, ಅಸ್ತಿತ್ವದ ಅವಶೇಷಗಳಲ್ಲಿ ಸೋತ ಹೆಣ್ಣಿನ ಕೂಗಿನ ಪ್ರತಿಧ್ವನಿಯ ಮೊರೆತ, ತೃಪ್ತಾ ತಾಯಿಯ ಕನಸುಗಳಲ್ಲಿ ಪ್ರಕೃತಿ ರಮಣಿಯ ಗೆಜ್ಜೆನಾದದಲ್ಲಿ ಅವತರಿಸಿದ ಮಹಾನ್ ಗುರುವಿನ ಮೃದು ದನಿ ಇಂಥ ಅದ್ಭುತ ಮತ್ತು ಮೋಹಕತೆ ಅವರ ಕವಿತೆಗಳಲ್ಲಿವೆ ಎಂದು ಅಭಿಪ್ರಾಯ ಪಡಲಾಗಿದೆ.

---

1 ಮತ್ತು2–ಭಾರತೀಯ ಸಾಹಿತ್ಯ ಸಮೀಕ್ಷೆ; ಪುಟ 412: ಸತೀಂದರ್ ಸಿಂಗ್(ಅನುವಾದ ಎಸ್. ಸುಮಿತ್ರ)ಪಂಜಾಬಿ ಕಾವ್ಯ ಕುರಿತ ಇಲ್ಲಿನ ಹಲವು ವಿಚಾರಗಳಿಗೆ ಈ ಲೇಖನಕ್ಕೆ ನಾನು ಋಣಿಯಾಗಿದ್ದೇನೆ.

ಪರಿವಿಡಿ

ಮೌನದ ಸಂಚು

ರಾತ್ರಿ ಆಕಳಿಸುತ್ತಿದೆ...........
ಮನುಷ್ಯನ ಹೃದಯಕ್ಕೆ ಕನ್ನ ಹಾಕಿದ್ದಾರೆ ಯಾರೋ
ಎಲ್ಲ ಚೌರ್ಯಕು ಮಿಗಿಲು ಕನಸುಗಳ ಚೌರ್ಯ
ಚೌರ್ಯದ ಚಿಹ್ನೆ-
ಎಲ್ಲ ದೇಶದ ಎಲ್ಲ ನಗರದ ಎಲ್ಲ ರಸ್ತೆಗಳಲಿ
ಕುಳಿತಿವೆ.
ಆದರೆ ಯಾವ ಕಣ್ಣೂ ನೋಡುತ್ತಿಲ್ಲ, ಬೆಚ್ಚುತ್ತಿಲ್ಲ
ಸರಪಳಿಯಿಂದ ಕಟ್ಟಿಹಾಕಿದ ನಾಯಿಯಂತೆ
ಯಾರದೋ ಒಂದು ಕವಿತೆ ಯಾವಾಗಲೋ
ಒಮ್ಮೆ ಬೊಗಳುತ್ತದೆ.

ಓ ನನ್ನ ಗೆಳೆಯ ! ನನ್ನ ಅಪರಿಚಿತ !

ಒಮ್ಮೆ ಇದ್ದಕ್ಕಿದ್ದಂತೆ ನೀನು ಬಂದುಬಿಟ್ಟಾಗ
ಕಾಲ ಬಿಲ್ಕುಲ್ ಹೈರಾಣಾಗಿ ನನ್ನ ಕೋಣೆಗೆ
ಬಂದು ನಿಂತುಬಿಟ್ಟಿತು
ಸಂಜೆಯ ಸೂರ್ಯ ಮುಳುಗುವುದರಲ್ಲಿದ್ದ
ಆದರೆ ಮುಳುಗಲಾಗಲಿಲ್ಲ.
ಮುಳುಗುವ ಭಾಗ್ಯವನ್ನು ಅವನು ಮರೆತಂತಿತ್ತು
ಮತ್ತೆ ಸಾವಿನ ನಿಯಮ ಒಂದು ಘೋಷಣೆ ಸಾರಿತು
ನಿಂತ ಆ ಕ್ಷಣಗಳನ್ನು ಕಾಲ ನೋಡಿತು
ಕಿಟಕಿಯ ಮಾರ್ಗವಾಗಿ ಆಚೆಗೋಡಿತು
ಕಳೆದ ಮತ್ತು ತಂಗಿದ ಆ ಕ್ಷಣಗಳ ಘಟನೆ
ನಿನಗೂ ಸೋಜಿಗವೆ ಎನಿಸುವುದು
ನನಗು ಕೂಡ ಭಾರೀ ಸೋಜಿಗವೆ ದಿಟ
ಇನ್ನು ಕಾಲಕ್ಕೂ ಆ ತಪ್ಪು ಬಹುಶಃ ಮತ್ತೆ ಕಳೆದುಹೋಗಲಿಲ್ಲ
ಈಗಲಾದರೂ ಸೂರ್ಯ ಸಮಯಕ್ಕೆ ಸರಿಯಾಗಿ
ಮುಳುಗಿಬಿಡುತ್ತಾನೆ
ಕತ್ತಲೆಯಂತೂ ನನ್ನ ಎದೆಗೆ ಇಳಿದುಬರುತ್ತದೆ.
ಆದರೆ ಕಳೆದ ಮತ್ತು ತಂಗಿದ ಕ್ಷಣಗಳ ಸತ್ಯವೊಂದಿದೆ
ನಾನು ಮತ್ತು ನೀನು ಅದನ್ನು ಒಪ್ಪುತ್ತೇವೋ ಬಿಡುತ್ತೇವೋ
ಆ ಮಾತು ಬೇರೆ
ಆದರೆ ಅಂದು ಕಾಲ ಕಿಟಕಿಯ ಮಾರ್ಗವಾಗಿ
ಹೊರಗೋಡಿದಾಗ
ಅದರ ಮೊಳಕಾಲಿಂದ ಹರಿಯಿತಲ್ಲ
ಆ ರಕ್ತ ನನ್ನ ಕಿಟಕಿಯ ಕೆಳಗೆ ಈಗಲೂ ಮಡುಗಟ್ಟಿನಿಂತಿದೆ.

ಅಶ್ವಮೇಧಯಾಗ

ಒಂದು ಚೈತ್ರದ ಹುಣ್ಣಿಮೆಯಲ್ಲಿ
ಹಾಲು ಬಿಳುಪಿನ ನನ್ನ ಪ್ರೇಮದ ಕುದುರೆ
ದೇಶವಿದೇಶಗಳತ್ತ ಸಂಚಾರ ಹೊರಟಿತು
ಮೈಯೆಲ್ಲವೂ ಸತ್ಯದ ಹಾಗೆ
ಅಚ್ಚ ಬಿಳುಪು
ಕಿವಿ ಮಾತ್ರ ವಿರಹಿಯ ಹಾಗೆ
ಶ್ಯಾಮಲ ವರ್ಣ
ಹಣೆಯ ಮೇಲೊಂದು ಬಂಗಾರದ ತಗಡು
ಅದರಲ್ಲಿ ಕೆತ್ತಿತ್ತು ಹೀಗೆ: "ಇದು
ಅಶ್ವಮೇಧದ ಕುದುರೆ–
ಸಮರ್ಥರಾದವರು ಇದ ಕಟ್ಟಿ
ಜಯಿಸ ಬಹುದು"
ಈ ಯಾಗದ ನಿಯಮದಂತೆ
ಅದು ನಿಂತ ಕಡೆಯೆಲ್ಲ ನಾನೊಂದು
ಹಾಡಹಾಡಿದೆ
ಕೆಲವೆಡೆ ಹವನ ಮಾಡಿದೆ
ಗೆಲ್ಲ ಬಂದವರೆಲ್ಲ ಸೋತುಹೋದರು
ಇಂದು ವಯೋಮಾನ ಮೀರಿದೆ
ಅದು ಸ್ವಸ್ಥವಾಗಿ ನನ್ನೆಡೆಗೆ ಮರಳಿದೆ
ಆದರೆ ನಂಬಲಾಗದ ಮಾತು !
ಪುಣ್ಯದ ಬಯಕೆ ಇಲ್ಲ,
ಫಲದ ಲಾಲಸೆಯೂ ಇಲ್ಲ
ಹಾಲು ಬಿಳುಪಿನ ಈ ನನ್ನ ಪ್ರೇಮದ

ಕುದುರೆಯನು ಕೊಲ್ಲಲಾಗುವುದಿಲ್ಲ......
ಕೊಲ್ಲಲಾಗುವುದಿಲ್ಲ.....
ಇರಲಿ ಇದು ಇಲ್ಲೇ ಸ್ವಸ್ಥವಾಗಿ ಪೂರ್ಣರೂಪದಲ್ಲಿ !
ನನ್ನ ಅಶ್ವಮೇಧ ಯಾಗ ಅಪೂರ್ಣವಾಗಿದೆ
ಇರಲಿ ಅದು ಅಪೂರ್ಣವಾಗಿಯೇ.

ನಾನು

ಬಹಳಷ್ಟು ಸಮಕಾಲೀನ–
ಆದರೆ ನಾನು ಮಾತ್ರ ನನ್ನ ಸಮಕಾಲೀನವಲ್ಲ
'ನಾನು' ಇಲ್ಲದ ನನ್ನ ಹುಟ್ಟು–
ಪುಣ್ಯದ ತಟ್ಟೆಯಲ್ಲಿ ಬಿದ್ದಿರುವ
ಅಪರಾಧದ ಒಂದು ಶಕುನ
ಮಾಂಸದಲ್ಲಿ ಸೆರೆಯಾದ ಮಾಂಸದ ಒಂದು ಕ್ಷಣ
ಅಲ್ಲದೆ ಮಾಂಸದ ಪ್ರತಿಯೊಂದು ನಾಲಗೆಯ ಮೇಲೆ
ಶಬ್ದವೊಂದು ಮೂಡಿದಾಗ
ಆತ್ಮಹತ್ಯೆ ಮಾಡಿಕೊಳ್ಳುತ್ತದೆ
ಆ ಆತ್ಮಹನನದಲ್ಲಿ ಸಾಯದೆ ಉಳಿದದ್ದು
ಕಾಗದದ ಮೇಲೆ ಅವತರಿಸಿತೋ
ಅದರ ಕೊಲೆಯಾಗುತ್ತದೆ
ಒಂದು ಬಾರಿ ನನಗೆ ಹನೋಯಿಯಲ್ಲಿ
ಬಂದೂಕಿನ ಗುಂಡು ತಾಕಿದರೆ
ಇನ್ನೊಮ್ಮೆ ಪ್ರಾಗ್ ನಲ್ಲಿ ತಾಗುತ್ತದೆ
ಮತ್ತು ಗಾಳಿಯಲ್ಲಿ ಹೊಗೆಯೊಂದು ಏಳುತ್ತದೆ
ಹಾಗೂ ನನ್ನ 'ನಾನು' ಎಂಟು ತಿಂಗಳ
ಕೂಸಿನ ಹಾಗೆ ಸಾಯುತ್ತದೆ
ಈ ನನ್ನ 'ನಾನು' ಎಂದಾದರೊಂದು ದಿನ
ನನ್ನ ಸಮಕಾಲೀನವಾದೀತೆ

ಒಂದು ಭೇಟಿ

ಅನೇಕ ವರ್ಷಗಳ ಬಳಿಕ ಅಚಾನಕ್ಕಾಗಿ ಆಯಿತಾ ಭೇಟಿ
ನಮ್ಮಿಬ್ಬರ ಪ್ರಾಣಗಳೂ ಕವಿತೆಯ ಹಾಗೆ ಕಂಪಿಸಿದವು........
ನಮ್ಮೆದುರು ಇಡೀ ಒಂದು ರಾತ್ರಿ ಇತ್ತು
ಆದರೆ ಅರ್ಧ ಕವಿತೆ ಒಂದು ಮೂಲೆಯಲ್ಲಿ ಮುದುಡಿ ಕುಳಿತಿತ್ತು
ಇನ್ನರ್ಧ ಕವಿತೆ ಮತ್ತೊಂದು ಮೂಲೆಯಲ್ಲಿ ಕುಳಿತಿತ್ತು
ಮತ್ತೆ ಬೆಳಿಗ್ಗೆ ಬೆಳಿಗ್ಗೆಯೇ
ಕಾಗದದ ಹರಿದ ಚೂರುಗಳಂತೆ ನಾವು ಸೇರಿದೆವು-
ಅವನ ಹಸ್ತವನು ನನ್ನ ಹಸ್ತದಲಿ ಹಿಡಿದೆ ನಾನು
ತನ್ನ ತೋಳ್ಗಗಳಲಿ ನನ್ನ ತೋಳ್ಗಗಳನು ಬಂಧಿಸಿದನವನು

ಮತ್ತೆ ನಾವಿಬ್ಬರೂ ಒಂದು ಸೆನ್ಸಾರಿನ ಹಾಗೆ ನಕ್ಕೆವು
ಕಾಗದವ ತಣ್ಣನೆಯ ಮೇಜಿನ ಮೇಲಿಟ್ಟು
ಆ ಇಡೀ ಕವಿತೆಯ ಮೇಲೊಂದು ಗೆರೆಯೆಳೆದುಬಿಟ್ಟೆ.

ಒಂದು ಭೇಟಿ

ನಾನು ಮೌನವಾಗಿ, ಶಾಂತಳಾಗಿ ನಿಶ್ಚಲಳಾಗಿ ನಿಂತಿದ್ದೆ
ಪಕ್ಕದ ಉಕ್ಕುವ ಕಡಲಿನಲ್ಲಿ ಮಾತ್ರ ಬಿರುಗಾಳಿ ಎದ್ದಿತ್ತು
ಮತ್ತೆ ಕಡಲಿಗೆ ಅದೇನೆನಿಸಿತೋ ಏನೋ ದೇವರೇ ಬಲ್ಲ
ಬಿರುಗಾಳಿಯನೊಂದು ಪೊಟ್ಟಣದ ಹಾಗೆ ಕಟ್ಟಿ
ನನ್ನ ಕೈಗಳಲಿ ತುರುಕಿ ನಗುತ್ತ ಸ್ವಲ್ಪ ದೂರವಾಗಿಬಿಟ್ಟಿತು

ಅಪ್ರತಿಭಳಾಗಿದ್ದರೂ ಅದರ ಮಜಾ ತೆಗೆದುಕೊಂಡೆ
ಇಂಥದೊಂದು ಘಟನೆ ಎಲ್ಲೋ ಶತಮಾನಕ್ಕೊಮ್ಮೆ ಮಾತ್ರ
ಘಟಿಸುತ್ತದೆಂದು ತಿಳಿದಿತ್ತು........

ಲಕ್ಷ ಲಕ್ಷ ಯೋಚನೆ-
ಮಸ್ತಕದಲಿ ಮಿಂಚಿ ಹರಿದಾಡಿದವು

ಇದ ಹಿಡಿದು ನನ್ನ ನಗರದಲಿ
ಎಂತು ಸಾಗಲಿ ಎಂದು ನಿಂತುಬಿಟ್ಟೆ
ನನ್ನ ನಗರದ ಬೀದಿ ಬೀದಿಯೂ ಕಿಷ್ಕಿಂಧ
ನನ್ನ ನಗರದ ಮನೆಮನೆಯ ಮಾಡೂ ತಗ್ಗೇ
ನನ್ನ ನಗರದ ಪ್ರತಿ ಗೋಡೆಯೂ ಬೈಗುಳವೇ.

ನೀನೆಲ್ಲಾದರೂ ಒಮ್ಮೆ ಸಿಕ್ಕಿದ್ದರೆ
ಸಮುದ್ರದ ಹಾಗೆ ಇದ ಎದೆಯ ಮೇಲಿಟ್ಟುಕೊಂಡು
ಎರಡು ತೀರಗಳ ಹಾಗೆ ನಾವು ನಗಬಹುದಿತ್ತೇನೋ
ಎಂದು ಅಂದುಕೊಂಡೆ ಹಾಗೂ

ತಗ್ಗಿನ ಮಾಡುಗಳ ಮತ್ತು ಕಿಷ್ಕಿಂಧದಂಥ
ಬೀದಿಗಳ ನಗರದಲ್ಲಿ ನೆಲಸಬಹುದಿತ್ತು ನಾವು.......

ಆದರೆ ನಿನ್ನ ಹುಡುಕುತ್ತ ಹುಡುಕುತ್ತ
ಇಡೀ ಮಧ್ಯಾಹ್ನ ಕಳೆದು ಹೋಯಿತು
ನನ್ನ ಬೆಂಕಿಯನು ನಾನೇ ನುಂಗಿಬಿಟ್ಟೆ
ನಾನೊಂದು ಒಂಟಿ ತೀರ, ತೀರವನು ನಾನು ಮೀಯಿಸಿದೆ
ಹಗಲು ಇನ್ನೇನು ಮುಗಿಯಿತೆನ್ನುವಾಗ–
ಕಡಲ ಬಿರುಗಾಳಿಯನು ಕಡಲಿಗೇ ಮರಳಿಸಿದೆ.......

ಈಗ ರಾತ್ರಿಯಾಗುತ್ತಿದ್ದಂತೆ ನೀನು ಸಿಕ್ಕಿದೆ
ನೀನು ಕೂಡಾ ದುಃಖಿ, ಮೌನಿ, ಶಾಂತ ನಿಶ್ಚಲ
ನಾನು ಕೂಡಾ ದುಃಖಿ, ಮೌನಿ, ಶಾಂತ ನಿಶ್ಚಲ
ದೂರದ ಉಕ್ಕುವ ಸಾಗರದಲ್ಲಿ ಮಾತ್ರ ಬಿರುಗಾಳಿ ಇದೆ.....

ಒಂದು ಘಟನೆ

ನಿನ್ನ ನೆನಪುಗಳು
ಗಡೀಪಾರಾಗಿ ಬಹುಕಾಲವಾಯ್ತು
ಸತ್ತಿವೆಯೋ–ಬದುಕಿವೆಯೋ ಒಂದೂ ತಿಳಿಯದು

ಒಮ್ಮೆ ಮಾತ್ರ ಒಂದು ಘಟನೆ ನಡೆಯಿತು
ಯೋಚನೆಗಳ ರಾತ್ರಿಯಾದರೋ ಬಹು ಗಾಢವಾಗಿತ್ತು
ಅದೆಂಥ ನಿಸ್ತಬ್ಧ ರಾತ್ರಿಯೆಂದರೆ
ಎಲೆಯೊಂದು ಮಿಸುಕಿದರೂ
ವರುಷಗಳ ಕಿವಿಯೂ ಬೆಚ್ಚಿಬೀಳುತಿತ್ತು

ಯಾರೋ ಎದೆಯ ಕದವ ತಟ್ಟಿದಂತೆ
ಹೆಜ್ಜೆಯೂರುತ್ತ ಮಾಡಿನ ಮೇಲೆ ಯಾರೋ ಹತ್ತುತ್ತಿದ್ದಂತೆ
ಉಗುರುಗಳಿಂದ ಹಿತ್ತಿಲ ಬಾಗಿಲನು ಕೆರೆಯುತಿದ್ದಂತೆ
ಮೂರುಬಾರಿ ಅನಿಸಿತು

ಮೂರು ಬಾರಿ ನಾನೆದ್ದು
ಬಾಗಿಲ ಚಿಲಕವನು ತಡವಿದೆ
ಕತ್ತಲೆಗೆ ಹೊಟ್ಟೆನೋವಾಗಿರಬಹುದೇನೋ ಎಂಬಂತೆ
ಒಮ್ಮೆ ಏನಾದರೂ ಹೇಳಿದರೆ ಇನ್ನೊಮ್ಮೆ
ಹಲ್ಲು ಕಚ್ಚುತ್ತ ತನ್ನ ದನಿಯ ಅಡಗಿಸಿತೆಂಬಂತೆ
ಅದು ಸುಮ್ಮನಾಗಿಬಿಡುತ್ತಿತ್ತು
ಮತ್ತೆ ಜೀವಂತವಾದೊಂದು ಹಾಡು
ಜೀವಂತವಾದೊಂದು ದನಿ ಕೇಳಿಬಂತು

“ಕತ್ತಲೆಯ ಹರಿದಾರಿಗಳಿಂದ ಬಂದವಳು ನಾನು
ಕಾವಲಿನವರ ಕಣ್ಣಿಂದ ಈ ನನ್ನ ತನುವ ತಪ್ಪಿಸುತ
ಮೆಲ್ಲ ಮೆಲ್ಲಗೆ ಬರುತ್ತಿರುವಾಗ
ನಿನ್ನ ಹೃದಯವೊಂದು ನೆಲೆ ಎಂದು ತಿಳಿಯಿತು
ಆದರೆ ನನ್ನ ಪಾಲಿಗದು ಯಾವುದೋ ಹಾಳುಬಿದ್ದ
ಶೂನ್ಯವಾದೊಂದು ಎಡೆ”

....

“ಶೂನ್ಯತೆಯೇನೋ ಬೇಕಾದಹಾಗಿದೆ. ಆದರೆ ನೀನು” ....
ಬೆಚ್ಚಿಬಿದ್ದು ನಾನೆಂದೆ–
“ ನೀನು ಗಡೀಪಾರಾದವಳು.... ಇಲ್ಲ, ನಿನಗಾವುದೇ ಎಡೆ
ನಾನು ಸರಿಯಾಗಿಯೇ ಹೇಳುತ್ತಿದ್ದೇನೆ
ಎಲ್ಲೂ ಸ್ಥಳವಿಲ್ಲ ನಿನಗೆ
ಇದು ನನ್ನ ಬುದ್ಧಿಯ, ನನ್ನ ಪ್ರಭುವಿನಾಜ್ಞೆ”
....

ಮತ್ತೆ ಕತ್ತಲೆಗೆ ಕತ್ತಲೆಯೇ ಕಂಪಿಸುವಂತೆ
ತಿರುಗಿ ಬಂದಳು ಅವಳು
ಆದರೆ ತೆರಳುವ ಮುನ್ನ ಸ್ವಲ್ಪ ಹತ್ತಿರ ಬಂದು
ಯಾರಾದರೂ ತಾಯ್ನೆಲದ ಮಣ್ಣನ್ನು ಮುಟ್ಟುವಂತೆ
ಮೆಲ್ಲಗೆ ನನ್ನ ಮೈ ಮುಟ್ಟಿದಳು.......

ಬೀದಿ ನಾಯಿ

ಹಲವು ವರ್ಷಗಳ ಹಿಂದಿನ ಸಂಗತಿ–
ನಾನು ನೀನು ಪರಸ್ಪರ ಅಗಲಿದಾಗ
ಪಶ್ಚಾತ್ತಾಪವೇನೂ ಆಗಲಿಲ್ಲ
ಒಂದು ಸಂಗತಿ ಮಾತ್ರ ಏನೇನೂ ಅರ್ಥವಾಗುತ್ತಿಲ್ಲ.....

ನಾನು ನೀನು ಗುಡ್ ಬೈ ಹೇಳುತ್ತಿದ್ದಾಗ
ಮತ್ತು ನಮ್ಮ ಮನೆ ಮಾರಾಟವಾಗುತ್ತಿದ್ದಾಗ
ಅಡುಗೆಮನೆಯ ಪಾತ್ರೆಗಳೆಲ್ಲ ಅಂಗಳದಲ್ಲಿ ಬಿದ್ದಿದ್ದಾಗ–
ಬಹುಶಃ ನನ್ನ ಅಥವಾ ನಿನ್ನ ಕಣ್ಣುಗಳಲ್ಲಿ ದಿಟ್ಟಿಸಿ ನೋಡಿ
ಕೆಲವರು ತಲೆ ಕೂಡ ಕೆಳಗೆ ಮಾಡಿದ್ದರು–
ಬಹುಶಃ ಮುಖ ಮುಚ್ಚಿಕೊಳ್ಳುತ್ತಿದ್ದರು
... .
ಬಾಗಿಲ ಬಳಿಯ ಬಾಡಿದಂತಿದ್ದ ಬಳ್ಳಿಯೊಂದು
ನನಗೂ ನಿನಗೂ ಬಹುಶಃ ಏನೋ ಹೇಳುತಿತ್ತು
–ಅಥವಾ ನಲ್ಲಿಯನು ಅಪಹಾಸ್ಯ ಮಾಡುತಿತ್ತು......

ಅಲ್ಲದೆ ಇದೆಲ್ಲ ಹೀಗೆ ಎಂದೂ
ನೆನಪಾಗುವುದಿಲ್ಲ
ಆದರೆ ಒಂದು ಸಂಗತಿ ಮಾತ್ರ
ಉತ್ಕಟವಾಗಿ ನೆನಪಾಗುತ್ತಿದೆ–
ಬೀದಿ ನಾಯೊಂದು–
ಅದು ಹೇಗೆ ಏನ ಮೂಸುತ
ಖಾಲಿ ಕೊಠಡಿಯೊಳಕ್ಕೆ ನುಗ್ಗಿ ಬಿಟ್ಟಿತೊ ಕಾಣೆ

ಜೊತೆಗೆ ಕೊಠಡಿಯ ಬಾಗಿಲೂ ಹೊರಗಿನಿಂದ
ಬಂದಾಗಿಬಿಟ್ಟಿತು

ಮೂರನೇ ದಿನ –
ಮನೆಯ ವ್ಯಾಪಾರ ನಿಗದಿಯಾದಮೇಲೆ
ಬೀಗದ ಕೈಗಳ ಒಪ್ಪಿಸಿ ನೋಟುಗಳು
ಕೈಬದಲಾದ ಮೇಲೆ
ಮನೆಯ ಹೊಸ ಯಜಮಾನನಿಗೆ
ಎಲ್ಲ ಬೀಗಗಳನೂ ಒಪ್ಪಿಸಿ
ಒಂದೊಂದು ಕೊಠಡಿಯನೂ ತೆರೆದು ತೋರಿಸುವಾಗ
ಕೊಠಡಿಯೊಂದರಲಿ
ಆ ನಾಯ ಹೆಣ ಬಿದ್ದಿತ್ತು.....

ಅದು ಬೊಗಳಿದ್ದ ನಾನೆಂದೂ
ಕಿವಿಯಾರ ಕೇಳಿರಲಿಲ್ಲ
ಕೇವಲ ಅದರ ವಾಸನೆ ಮೂಗಿಗೆ ಹತ್ತಿತ್ತು
ಈಗಲೂ ನನಗೆ ಅದೇ ವಾಸನೆ ಇದ್ದಕಿದ್ದಂತೆ–
ಅನೇಕ ವಸ್ತುಗಳಿಂದ ಹೊಮ್ಮುತ್ತದೆ.....

ವೈರಾಗ್ಯ

ಬಲು ಹಿಂದಿನಿಂದ ಜನರಲ್ಲಿ ಕೇಳಿಬರುತಿದ್ದ
ಒಂದು ಮಾತುಂಟು: ಕಾಲಕ್ಕೆ
ಎಂಥ ಶಕ್ತಿ ಇದೆ ಎಂದರೆ
ಅದು ಲಂಚ ನೀಡುತ್ತ ಕಳ್ಳತನದಲ್ಲಿ
ಇತಿಹಾಸದಿಂದ ಅದರ ಹಾಳೆಗಳನ್ನು
ಖರೀದಿಸುತ್ತ ಬರುತಿದೆ
ತನಗೆ ಇಷ್ಟ ಬಂದಾಗಲೆಲ್ಲ
ಕೆಲ ಪಂಕ್ತಿಗಳ ಬದಲಿಸುತ
ಮತ್ತೆ ಕೆಲವೊಂದ ಅಳಿಸುತ್ತ ಸಾಗಿದೆ
ಇತಿಹಾಸ ಹಾಸ ಬೀರುತ್ತ
ಕೋಪಿಸುತ ಪ್ರತಿಯೊಬ್ಬ
ಇತಿಹಾಸಕಾರನನು ಕ್ಷಮಿಸುತ್ತ ನಡೆದಿದೆ
ಆದರೆ ಇಂದು ಅದು ಬಹಶಃ ಬಲು ದುಃಖಿ–
ಒಂದು ಕೈಯಲ್ಲಿ ಇತಿಹಾಸಕಾರನ ಪುಸ್ತಕವ
ಕೈಗೆತ್ತಿಕೊಂಡು ಕೆಲವು ಪುಟಗಳ ಹರಿದು
ಅವುಗಳ ಜಾಗದಲಿ ಬೇರೆಯದೇ
ಪುಟಗಳನು ಸೇರಿಸುತ್ತಿದೆ.
ಇತಿಹಾಸ ಸುಮ್ಮನೆ ಸದ್ದಿಲ್ಲದೆ
ಆ ಹಾಳೆಗಳಿಂದ ಹೊರನಡೆದು ಒಂದು
ಮರದ ಕೆಳಗೆ ನಿಂತು ಸಿಗರೇಟೊಂದ ಸೇದುತ್ತಿದೆ.........

ಯಾತ್ರಾ ವರ್ಣನೆ

ಗಂಗಾ ಜಲದಿಂದ ತೊಡಗಿ ವೋಡ್ಕಾದವರೆಗೆ ಸಾಗುವ
ನೀರಡಿಕೆಯ ಯಾತ್ರಾ ವರ್ಣನೆ ನನ್ನದು......
ಸಾಮಾನ್ಯವಾದೊಂದು ಪವಿತ್ರ ಹುಟ್ಟು
ಸಾಮಾನ್ಯವಾದೊಂದು ಅಪವಿತ್ರ ಕರ್ಮದ ಸಾಮಾನ್ಯ ಚಿಕಿತ್ಸೆ
ಪ್ರಿಯತಮನ ಮೊಗವನು ಹೊಳೆವ ಗಾಜಿನಲಿ ನೋಡುವ ಯತ್ನ
ನನ್ನ ಶರೀರದ ಅತ್ಯಂತ ಅಪರಿಚಿತ ಗಾಯವನು ಮರೆವ ಯತ್ನ

ತ್ರಿಕೋಣಾಕಾರದ ಎಷ್ಟೊಂದು ಕಲ್ಲುಗಳು–
ಗುಟುಕು ನೀರಿನೊಂದಿಗೆ ಗಂಟಲಲ್ಲಿ ಇಳಿದಿವೆ
ವರ್ತಮಾನದಿಂದ ನನ್ನನ್ನು ಕಾಪಾಡಿದ ಭವಿಷ್ಯಗಳು ಅದೆಷ್ಟು
ಬಹುಶಃ ವರ್ತಮಾನವನ್ನೂ–
ನಾನು ವರ್ತಮಾನದಿಂದ ರಕ್ಷಿಸಿದ್ದೇನೆ....

ಸಾರಂಗಿಯ ತಂತಿ ಇದ್ದಕಿದ್ದಂತೆ ರಾಗವೊಂದರ
ಎದೆಯನಿರಿಯುವಂತೆ
ಅಥವಾ ಕಪ್ಪು ಬಿಳಿ ಹಲ್ಲುಗಳಿಂದ ಪಿಯಾನೋ ವಾದ್ಯ
ರಾಗವನು ಮೀಟುವಂತೆ
ಒಂದೇ ಒಂದು ಯೋಚನೆ ಮಾತ್ರ ಬಂದಿದೆ
ಹಲವು ಸಲ ಬರುತ್ತದೆ

ಮೃತ್ಯುವಿನ ಗುಟುಕೊಂದ ತುಂಬಿಕೊಂಡವರು
ಹೆದರುವಂತೆ ಯೋಚನೆಯೊಂದು ಬರುತ್ತದೆ–
ಕೂಡಲೇ ಆ ಯೋಚನೆಯನೇನು ಮಾಡುವುದೆಂದು....

ಆದರೆ ಮೃತ ಎದೆಗಳಲ್ಲು ಕೆಲ ಉಸಿರು ಜಿವಂತವಿವೆ
ಈ ಯಾತ್ರಾ ವರ್ಣನೆಗಳು ಕೊನೆಗೊಂಡಲ್ಲಿಂದಲೇ
ಪ್ರತಿಯೊಂದು ಪಯಣ ಶುರುವಾಗುತ್ತದೆಂದು
ಎದೆಯಲ್ಲಿ ಸಿಕ್ಕಿಕೊಂಡ ಉಸಿರಿನಿಂದ ನಾನು ಹೇಳಬಲ್ಲೆ.....

ಆಷ್ ಟ್ರೇ

ದೇವವಾಣಿಯ ಧೂಮದಿಂದ ಸಿಗರೇಟಿನ ಬೂದಿಯವರೆಗೆ
ವಯಸ್ಸಿನ ಸೂರ್ಯ ಇಳಿದ
ಹಣೆಯ ಯೋಚನೆಯ ಗೆರೆಗಳು ಧಗಧಗಿಸಿದವು
ಒಂದು ಪುಪ್ಪುಸ ಕರಗಿತು
ಒಂದು ವಿಯತ್ ನಾಮ್ ಹೊತ್ತಿ ಉರಿಯಿತು

ಜ್ವರದಲ್ಲಿ ಕತ್ತಲೆಯ ದೇಹ ಸುಡುವಂತೆ
ಜ್ವರದ ಮೂರ್ಛಾವಸ್ಥೆಯಲಿ ಬೆಳಕು–
ಪ್ರತಿಯೊಂದು ಧರ್ಮ ದಾರಿ ತಪ್ಪಿಸಿತು
ಪ್ರತಿಯೊಂದು ದರ್ಶನ ಕುಂಟತೊಡಗಿತು
ಪ್ರತಿ ರಾಜ್ಯಭಾರವೂ ಕಾಂಚಾಣದ್ದಾಗಿರುತ್ತದೆ
ಬಂದೂಕಿನದ್ದಾಗಿರುತ್ತದೆ ಎಂದು
ಪ್ರತಿ ಕವಿತೆ ತೊದಲುತ್ತ
ಹೇಳಲಿಚ್ಛಿಸಿದಂತಿತ್ತು
ಮತ್ತು ಪ್ರತಿಯೊಂದು ಜಾತಕವೂ–
ಆದಮನ ಹುಟ್ಟಿಗೊಂದು ಸುಳ್ಳು ಸಾಕ್ಷಿ

ಕಾಲ್ಗಳಲಿ ಕಬ್ಬಿಣ ತೊಡರಿಕೊಂಡಿತು
ಕಿವಿಗಳಲಿ ಕಲ್ಲು ಸಿಕ್ಕಿಕೊಂಡಿತು
ಆಲೋಚನೆಗಳ ಲೆಕ್ಕ ನಿಂತಿತು
ನಾಣ್ಯಗಳ ಲೆಕ್ಕ ಚಲಿಸಿತು
ಆದಮನಾದ ನಾನು– ಕೊನೆಗೆ ಮಾಂಸದ
ಒಂದು ಆಷ್ ಟ್ರೇ ಆಗುತ್ತೇನೆ

ದೇವವಾಣಿಯ ಧೂಮದಿಂದ ಸಿಗರೇಟಿನ ಬೂದಿಯವರೆಗೆ
ನಾನು ಕುಡಿದ ಚಿಂತೆಗಳ ಬೂದಿ
ಕೊಡವಿದ್ದೇನೆ
ನೀನೂ ಅದ ಕೊಡವಬಹುದು

ಬಯಸಿದರೆ ನೀನು ಮಾಂಸದ ಈ ಆಷ್ ಟ್ರೇಯನ್ನು
ಮೇಜಿನ ಮೇಲೆ ಸಿಂಗರಿಸು
ಅಥವಾ ಇಷ್ಟಪಟ್ಟರೆ ಗಾಂಧಿ, ಲೂಥರ್ , ಕೆನಡಿ ಹೆಸರು ಹೇಳುತ್ತ
ಇದ ಒಡೆದುಹಾಕ ಬಹುದು.......

ಸೃಷ್ಟಿಕ್ರಿಯೆ

ಕವಿತೆ ಕೆಲವೊಮ್ಮೆ ಕಾಗದವನ್ನು ನೋಡುತ್ತ
ಅದು ಪರಪುರುಷನೋ ಎಂಬಂತೆ
ಮುಖ ತಿರುಗಿಸುತ್ತಾಳೆ.....

ಆದರೆ ಕೆಲವೊಮ್ಮೆ ಕೃಷ್ಣ ಚತುರ್ಥಿಯ
ವ್ರತ ಹಿಡಿದಿರುವ ಕನ್ಯೆಯಂತೆ
ಅಂದು ರಾತ್ರಿ ಕನಸೊಂದ ಕಾಣುತ್ತಾಳೆ
ಇದ್ದಕಿದ್ದಂತೆ ಯಾರೋ ಪುರುಷ
ಅವಳ ಮೈಮುಟ್ಟಿದ್ದಕ್ಕೆ ಕನಸಿನಲ್ಲಿ ಅವಳ
ಮೈ ಕಂಪಿಸುತ್ತದೆ.

ಆದರೆ ಇನ್ನು ಕೆಲವೊಮ್ಮೆ ಅವಳು ಬುಸುಗುಡುತ್ತ
ಬೆಚ್ಚಿಬಿದ್ದು ಎಚ್ಚರಾಗುತ್ತಾಳೆ
ತಾರುಣ್ಯ ಭರಿತ ಅಂಗಗಳನು ಸವರಿಕೊಳ್ಳುತ್ತ
ರವಿಕೆಯ ಗುಂಡಿಗಳನ್ನು ಬಿಚ್ಚುತ್ತಾಳೆ
ಬೊಗಸೆಯಷ್ಟು ಬೆಳುದಿಂಗಳನು ಮೈಮೇಲೆ ಸುರಿದುಕೊಳ್ಳುತ್ತಾಳೆ
ಮೈಯನ್ನು ಒಣಗಿಸುವವಳ ಕೈ
ಬಿಕ್ಕುತ್ತ ಹೋಗುತ್ತದೆ

ಕಾಯದ ಕತ್ತಲೆ ಚಾಪೆಯಂತೆ ಬಿಚ್ಚಿಕೊಳ್ಳುತ್ತದೆ
ಮುಖ ಕೆಳಗೆ ಹಾಕುತ್ತ ಅವಳು ಚಾಪೆಯ ಮೇಲೆ
ಉರುಳಿಕೊಳ್ಳುತ್ತಾಳೆ
ಅದರ ಕಡ್ಡಿಗಳಿಂದ ತಿವಿದುಕೊಳ್ಳುತ್ತ

ಅವಳ ಅಂಗ ಅಂಗವೂ ಹೊತ್ತಿ ಉರಿಯತೊಡಗುತ್ತದೆ
ಅವಳ ಕಾಯದ ಕತ್ತಲೆ
ಯಾರದೋ ಬಲಿಷ್ಠ ಬಾಹುಗಳಲಿ ನುಗ್ಗುನುರಿಯಾಗ
ಬಯಸುತ್ತದೆ......

ಒಮ್ಮೆಲೇ ಕಾಗದವೊಂದು ಮುನ್ನುಗ್ಗಿ
ಅವಳ ನಡುಗುವ ಕೈಗಳನು ಸ್ಪರ್ಶಿಸುತ್ತದೆ
ಒಂದು ಅಂಗ ಹೊತ್ತಿಕೊಂಡರೆ
ಇನ್ನೊಂದು ಅಂಗ ಕರಗುತ್ತದೆ
ಅಪರಿಚಿತ ಪರಿಮಳವ ಮೂಸುತ್ತಾಳೆ
ಅವಳ ಕೈಯಾದರೋ ಕಾಯದ ಮೇಲೆದ್ದಿರುವ ಗೆರೆಗಳನು
ನೋಡುತ್ತದೆ

ಕೈ ಜೋಮುತ್ತ ಕಾಯ ಚಡಪಡಿಸುತ್ತ
ಹಣೆಯ ಮೇಲೆ ಬೆವರ ಹನಿಗಳು ಮೂಡುತ್ತವೆ
ಉದ್ದ ಗೆರೆಯೊಂದು ಮೂಡುತ್ತ
ಸಾವು ಬದುಕುಗಳ ದ್ವಂದ್ವ ಗಂಧದಲಿ ಉಸಿರು ತೋಯುತ್ತದೆ.....

ಈ ಎಲ್ಲ ಕಪ್ಪನೆಯ ತೆಳು ಗೆರೆಗಳು
ದೀರ್ಘ ಚೀರುವಿಕೆಯ ಕೆಲ ತುಣುಕುಳ ಹಾಗಿರುವುವು
ಅವಳಾದರೊ ಚಕಿತ ನೀರವ ರಸಹೀನೆಯಂತೆ ನಿಂತು ನೋಡುತ್ತ-
ಏನೋ ಆಗಬಾರದ್ದು ಆಗಿಬಿಟ್ಟಿದೆ
ತನ್ನ ಅಂಗವಾವುದೋ ಸತ್ತಿದೆ
ಬಹುಶಃ ಕನ್ಯೆಯೊಬ್ಬಳ ಗರ್ಭಪಾತವಾಗುವುದು ಹೀಗೆಯೇ
ಎಂದು ಯೋಚಿಸುವಳು.....

ಸ್ವಸ್ತಿಪಾನ

ನಿನ್ನೆ ಗಾಜಿನ ಹೂಜಿಯಲ್ಲಿ
ವಿಚಾರಗಳ ಮದಿರೆ ತುಂಬಿದ್ದೆ
ವಿಚಾರಗಳು ತುಂಬ ಕೆಂಪಗಿದ್ದುವು
ಮಿತ್ರರು ಮದಿರೆ ಸೇವಿಸಿದ್ದರು
ಹೃದಯದಿಂದ ಹೊಮ್ಮದ ಶಬ್ದಗಳಲಿ
ಸ್ವಸ್ತಿಪಾನ ಹೇಳಿದ್ದರು ಅವರು
ಯಾವ ಮರಗಳ ಮೇಲೆ ಅವು ಬೆಳೆಯುತ್ತವೆ
ಯಾವ ತುಟಿಗಳ ಕುಂಡಗಳಲಿ ಹೇಗೆ ಹೊಮ್ಮುತ್ತವೆ
ಇದನು ಯೋಚಿಸುವ ಹೊತ್ತು ಅದಾಗಿರಲಿಲ್ಲ
ಅಥವಾ ಯೋಚಿಸಲು ಅಂಜಿಕೆಯಾಗುತ್ತಿತ್ತು ಎಂದು ಹೇಳಲೆ?
ಇದು ಶಬ್ದಗಳ ಉತ್ಸಾಹ
ಕಪಟಗಳ ಹುಟ್ಟುಹಬ್ಬ
ನಾನು ಇದ್ದೆ, ರಾತ್ರಿ ಇತ್ತು , ವಿಚಾರಗಳ ಮದಿರೆಯಿತ್ತು
ಮತ್ತು ಬಹುಮಂದಿ ಗೆಳೆಯರಿದ್ದರು
ಕರೆದದ್ದಕ್ಕೆ ಬಂದವರು ಕೆಲವರಾದರೆ ಕರೆಯದೆ ಬಂದವರು
ಇನ್ನು ಕೆಲರು
ಮತ್ತೆ ಮತ್ತೆ ಕರೆದಿದ್ದರೂ ಬರದಿದ್ದವನು 'ಅವನು' ಮಾತ್ರ
....
ಇದೀಗ ತಾನೆ ಬೆಳಕು ಹರಿದಿದೆ–
ಹೃದಯ ಬಗೆದು ಹೃದಯದೊಳಗೆ ಬಿದ್ದಿದೆ ಸೂರ್ಯ ಕಿರಣ
ಈಗ ತಾನೆ ದಟ್ಟ ಕಾಡೊಂದ ಕಂಡಿರುವೆ ನಾನು
ಸ್ವಾರ್ಥಿಗಳ ಮರಗಳನು ನೋಡಿರುವೆ
ಮರಗಳಿಗೆ ಬಂದ ಶಿಶಿರವನೂ ಕಂಡಿರುವೆ

ಶಬ್ದಗಳಿಗೆ ಶಿಶಿರ ಬರುವುದಿಲ್ಲ
ಅರ್ಥಗಳಿಗೆ ಮಾತ್ರ ಬರುತ್ತದೆ
ಗೆಳೆಯರ ಶಬ್ದಗಳಿಗೆ ಈಗಲೂ ಗುಲಾಬಿ ರಂಗು
ವಸಂತದ ಹೂಗಳ ಹಾಗೆ
ಕೇವಲ ಅರ್ಥ ಉದುರುವುದ ನೋಡುತ್ತಿದ್ದೇನೆ.
ಈ ದಟ್ಟ ಕಾಡಿನಲಿ ನಾನೊಬ್ಬಳೇ ಏಕಾಂಗಿ
ನಾನಿರುವೆ, ಮೌನವಿದೆ ಕಿರಣವಿದೆ, ಗಾಜಿನ ಖಾಲಿ ಹೂಜಿಯಿದೆ

....

ಹೆಜ್ಜೆಗಳ ಸದ್ದು ಸೇರಿರುವ ಇದು ಎಂಥ ಮೌನ
ಯಾರೋ ಸದ್ದಿಲ್ಲದೆ ಬಂದಿದ್ದಾನೆ-
ಮೌನದಿಂದ ಕಡಿದುಹೋದ ಮೌನದ ತುಣುಕು
ಕಿರಣದಿಂದ ಕಡಿದುಹೋದ ಕಿರಣದ ತುಣುಕು
ಹಲವು ಸಲ ಕರೆದಾಗಲೂ ಬಾರದ 'ಅವನೇ' ಯಾರೋ
ಒಬ್ಬ ಇವನು
ನಾನೀಗ ಒಬ್ಬಂಟಿಯಲ್ಲ, ನನ್ನ ಜೊತೆಗಾರನೊಡನೆ ನಿಂತಿದ್ದೇನೆ
ಗಾಜಿನ ಹೂಜಿಯಲ್ಲಿ ನೋಟಗಳ ಮದಿರೆ ತುಂಬಿದೆ
ನಾವಿಬ್ಬರೂ ಮದಿರೆ ಹೀರುತ್ತಿದ್ದೇವೆ
ಹೃದಯದಲ್ಲಿ ಮಾತ್ರ ಮೂಡುವಂಥ
ಶಬ್ದಗಳ ಸ್ವಸ್ತಿಪಾನವನು ಹೇಳುತ್ತಿದ್ದಾನೆ.
ಇದು ಅರ್ಥಗಳ ಉತ್ಸಾಹ-
ನಾನಿರುವೆ, ಅವನಿರುವ, ಗಾಜಿನ ಹೂಜಿಯಲಿ ನೋಟಗಳ
ಮದ್ಯವಿದೆ.

ಕುಮಾರಿ

ನಿನ್ನ ಸೆಜ್ಜೆಯ ಮೇಲೆ ಕಾಲಿಟ್ಟಂದು
ನಾನು ಒಬ್ಬಳಾಗಿರಲಿಲ್ಲ
ಇಬ್ಬರಾಗಿದ್ದೆ
ಒಂದು ಕಡೆ ವಿವಾಹಿತೆ
ಇನ್ನೊಂದು ಕಡೆ ಕನ್ಯೆ
ನಿನ್ನ ಸುಖದ ಸಲುವಾಗಿ
ಆ ಕನ್ನೆತನವನು ನಾನು ಕೊಲೆಗೈಯಬೇಕಿತ್ತು
ಕೊಂದೆ
ಇಂಥ ಕೊಲೆಗಳೇನೋ ಕಾನೂನುಬದ್ಧ
ಅವುಗಳ ಅಪಮಾನ ಕಾನೂನು ಬದ್ಧವಲ್ಲ
ನಾನು ಆ ಅಪಮಾನದ ವಿಷವ ನುಂಗಿದ್ದೆ
ಮತ್ತೆ ಬೆಳಗಾಗ ಎದ್ದಾಗ
ರಕ್ತದಲಿ ನಾಂದ ನನ್ನ ಕೈಗಳ ಕಂಡಿದ್ದೆ
ಕೈಗಳನು ತೊಳೆದಿದ್ದೆ
ಮಲಿನ ಮೈಯನು ತೊಳೆವಂತೆಯೆ
ತೊಳೆದಿದ್ದೆ
ಆದರೆ ಕನ್ನಡಿಯ ಎದುರು ನಾನು
ನಿಂತ ಕೂಡಲೆ ಅವಳು ನನ್ನೆದುರು ನಿಂತಳು
ಅವಳೇ
ನಾನು ರಾತ್ರಿ ಕೊಂದವಳು !
ಓ ದೇವರೆ !
ಹಾಸಿಗೆಯ ತುಂಬ ಕತ್ತಲೆ ಗಾಢವಾಗಿತ್ತೆ ?
ನಾನು ಯಾರನ್ನು ಕೊಲೆಗೈಯ ಬೇಕಿತ್ತು?
ಯಾರನ್ನು ಕೊಂದುಬಿಟ್ಟೆ........

ಕವಚ

ನಾನು ಸ್ನೇಹದ ಕವಚ ಧರಿಸಿದ್ದೇನೆ
ಹಾಗಾಗಿ ನನ್ನ ನಗ್ನ ದೇಹವನು ಯಾವುದೂ ಸ್ಪರ್ಶಿಸುವುದಿಲ್ಲ
ಶತ್ರುವಿನ ಕೈಯಾಗಲಿ ಮಿತ್ರನ ತೋಳಾಗಲಿ ಸ್ಪರ್ಶಿಸುವುದಿಲ್ಲ
ನಾನು ಸ್ನೇಹದ ಕವಚ ಧರಿಸಿದ್ದೇನೆ
ನಾನೀಗ ಸಂತುಷ್ಟಳು
ಅದರೆ ಕೆಲ ಸಂತಸಗಳು ಇಷ್ಟೇಕೆ ದುಗುಡದಿಂದಿರುತ್ತವೆಂದು
ತಮ್ಮನೇಕೆ ಕೇಳುತಿಹರು?
ನನ್ನ ಕವಚವನ್ನು ಯಾವುದೋ ಮರದ
ಹಸಿರೆಂದು ತಿಳಿದೋ ಏನೋ
ಹಾರುತ್ತಿರುವ ಕೆಲ ಹಕ್ಕಿಗಳು ಈಗ ತಾನೆ
ನನ್ನ ಹಣೆಯ ಮೇಲೆ ಕುಳಿತುಬಿಟ್ಟಿದ್ದವು
ಆದರೆ ಕಬ್ಬಿಣದ ಎಲೆಗಳಿಗೆ ಕೊಕ್ಕು ತಾಗಿಸಿ
ಇದೀಗ ತಾನೆ ಮತ್ತೆ ಮತ್ತೆ ಚೀರಾಡಿ
ನನ್ನ ಹಣೆಯ ಮೇಲಿಂದ
ಹಾರಿಹೋಗಿವೆ ಹುಚ್ಚು ಹಕ್ಕಿಗಳು........
ಕವಚ ಎಂದಾದರು ಹಕ್ಕಿಗಳಿಗೆ ಹೆದರಿದ್ದುಂಟೆ ?
ಬಹುಶಃ ಯಾವುದೋ ಕೊಕ್ಕು ಮಾಂಸಕ್ಕೂ ಲಗ್ಗೆ ಹಾಕಿತ್ತೇನೋ
ನನ್ನ ಹಣೆಯ ಮಾಂಸ ನೋಯುತ್ತಿರಬಹುದೆನಿಸುತ್ತದೆ
ಕಾಲ ಈಗ ಕೊರಳಿನಿಂದ ಬಟ್ಟೆಗಳನೆಲ್ಲ ಕಳಚಿಹಾಕಿದೆ
ಇದ್ದವು ಮೂರೇ ಬಟ್ಟೆಗಳು
ಭೂತಕಾಲದ್ದು ಒಂದಾದರೆ, ವರ್ತಮಾನದ್ದು ಇನ್ನೊಂದು,
ಭವಿಷ್ಯದ್ದು ಮತ್ತೊಂದು
ಮೂರೂ ಬಟ್ಟೆಗಳು ತುಂಬ ಮಲಿನವಾಗಿದ್ದವು

ಬೆತ್ತಲೆಯ ಕಾಲ ಈಗ ಮೂಲೆಯಲ್ಲಿ ನಿಂತು
ಸ್ವಲ್ಪ ನಾಚಿದಂತಿದೆ
ಅಥವಾ ಅದರ ಬೆತ್ತಲೆ ಬೆನ್ನ ಮೇಲೆ ಒಳಗೊಳಗೇ ಅಳುತ್ತಿರುವ
ಇದು
ನನ್ನ ಕಣ್ಣಿನ ಪ್ರತಿಬಿಂಬವೇನು?
ಅಥವಾ ಅದು   ತನ್ನ ನಗ್ನತೆಯ ಬದಲು ನನ್ನ ನಗ್ನತೆಯ
ಕುಡಿದಿದೆಯೇನು?
ಆದರೆ ನಾನು– ನಾನಂತೂ ಈಗ ನಗ್ನಳಲ್ಲ
ನಾನು ಸ್ನೇಹದ ಕವಚ ಧರಿಸಿಬಿಟ್ಟಿದ್ದೇನೆ......

ನನ್ನ ವಿಳಾಸ

ಇಂದು ನಾನು ನನ್ನ ಮನೆಯ ನಂಬರನ್ನು
ಅಳಿಸಿಹಾಕಿದ್ದೇನೆ
ಬೀದಿಯ ಹಣೆಯ ಮೇಲೆ ಬರೆದಿದ್ದ
ಬೀದಿಯ ಹೆಸರನ್ನು ತೊಡೆದುಹಾಕಿದ್ದೇನೆ
ಪ್ರತಿಯೊಂದು ರಸ್ತೆಯನು ಸೂಚಿಸುವ
ದಿಕ್ ಫಲಕವನು ಅಳಿಸಿಬಿಟ್ಟಿದ್ದೇನೆ
ಆದರೆ ನಿಮಗೆ ನಾನು ಸಿಗಲೇಬೇಕೆಂದಿದ್ದರೆ
ಎಲ್ಲ ದೇಶದ ಎಲ್ಲ ನಗರಗಳ
ಎಲ್ಲ ಬೀದಿಗಳ ಎಲ್ಲ ಬಾಗಿಲನು ತಟ್ಟಿನೋಡಿ
ಇದೊಂದು ಶಾಪ ಮತ್ತು ವರ
ಅಲ್ಲದೆ ಎಲ್ಲಿಯಾದರು ಸರಿಯೆ
ಸ್ವಾತಂತ್ರ್ಯದ ಚೆಹರೆ ಸುಳುಹುದೋರಿದರು ಸಾಕು
–ಅದೆ ನನ್ನ ಮನೆಯೆಂದು ತಿಳಿಯುವುದು ನೀವು

ಸ್ಟಿಲ್ ಲೈಫ್

ಇದು ಜಲಿಯನ್ ವಾಲಾ–
ಅದರ ಗೋಡೆಗಳಲಿ ಸದ್ದಿಲ್ಲದೆ ಕುಳಿತಿವೆ ಗುಂಡುಗಳು ಕೊರೆದ ರಂಧ್ರಗಳು
ಇದು ಸೈಬೀರಿಯಾ–
ಹಿಮದಲಡಗಿದ ಆಕ್ರಂದನದ ತುಣುಕುಗಳು ಅದರ ನೆಲದಲ್ಲಿವೆ
ಕಾನ್ಸೆಂಟ್ರೇಷನ್ ಕ್ಯಾಂಪ್–
ಭಟ್ಟಿಗಳ ಬೂದಿಯಲಿ ಮನುಷ್ಯರ ಮಾಂಸದ ವಾಸನೆ ಸುಪ್ತವಾಗಿದೆ
ಇದು ಕರಾಗುಯೇ ವಾಚ್–
ಅದರ ಒಟ್ಟು ಜನಸಂಖ್ಯೆ ಕಲ್ಲಿನ ಒಂದು ಮೂರ್ತಿಯಲಿ ಮುದುಡಿ ಕುಳಿತಿದೆ
ಇದು ಹಿರೋಶಿಮಾ–
ಮೂಲೆಯೊಂದರಲಿ ಹರಿದು ಚೂರಾದ ಲೆಕ್ಕದ ಪುಸ್ತಕದ ಹಾಗೆ ಬಿದ್ದಿದೆ
ಇದು ಪ್ರಾಗ್–
ಉಸಿರು ಕಟ್ಟಿ ಇಂದು ಸೆನ್ಸಾರಿನ ಮುಷ್ಟಿಯಲಿ ಕುಳಿತಿದೆ
ಎಲ್ಲವೂ ಮೌನ, ನಿಶ್ಚಲ
ಕೇವಲ ನನ್ನೆದೆಯಿಂದ ಮಾತ್ರ ಗಾಢ ನಿಟ್ಟುಸಿರೊಂದು ಹೊಮ್ಮುತ್ತದೆ
ಅದರಿಂದ ಭೂಮಿಯ ಪ್ರತಿಯೊಂದು ತುಣುಕು ಕಂಪಿಸುತ್ತ ಹೋಗುತ್ತದೆ

೨

ಪ್ರತಿಯೊಂದು ಪ್ರಶ್ನೆಯೂ ಉತ್ತರವನಾಧರಿಸಿತ್ತು
ಪ್ರತಿಯೊಂದು ಉತ್ತರವೂ ಪ್ರಶ್ನೆಯನಾಧರಿಸಿತ್ತು
ಈಗ ಆಧಾರ ಸಿಗುವುದಿಲ್ಲ
ಹಾಗಾಗಿ ಪ್ರತಿಯೊಂದು ಪ್ರಶ್ನೆಯೂ
ತಲೆಕೆಳಕಾಗಿ ನಿಂತು
ಶೀರ್ಷಾಸನ ಮಾಡುತ್ತಿದೆ
–ಪ್ರಾಣಾಯಾಮ ಮಾಡುತ್ತಿದೆ.

ಮಾರ್ಟಿನ್ ಲೂಥರ್ ಕಿಂಗ್

ನಿನ್ನ ಮಾತು ಮೃತವಾಗಿದೆ
ಅದರ ನಡುಗುವ ಕೈಗಳ
ಊದಿರುವ ಕಣ್ಣುಗಳ
ಮತ್ತು ನೀಲಿ ತುಟಿಗಳ ಕುರಿತು ನಾನು ಹೇಳುತ್ತಿಲ್ಲ
ಅದರ ಶವವ ಮೀಸುತ್ತಿದ್ದಾಗ
ಅದರ ಗರ್ಭದಲಿ ಕವಿತೆಯೊಂದಿತ್ತು
ಎಂದಷ್ಟೆ ಹೇಳಬಲ್ಲೆ–

ಕಾಜಾನ್ ಜಾಕಿಸ್

ನಾನು ಜೀವನವನ್ನು ಪ್ರೀತಿಸಿದ್ದೆ
ಜೀವನವಾದರೋ ಒಬ್ಬ ವೇಶ್ಯೆಯ ಹಾಗೆ
ನನ್ನ ಪ್ರೇಮವ ಕುರಿತು ನಗೆಯಾಡುತಿತ್ತು
ನಾನೊಬ್ಬ ದುಃಖಿ ಭಗ್ನಪ್ರೇಮಿಯಂತೆ
ಯೋಚನೆಗಳಲಿ ಮುಳುಗಿ ಬಿಡುತ್ತಿದ್ದೆ......
ಆದರೆ ಈ ವೇಶ್ಯೆಯ ನಗೆಯನ್ನು
ನಾನು ಕಾಗದಕ್ಕೆ ಇಳಿಸಿದಾಗ
ಪ್ರತಿಯೊಂದು ಅಕ್ಷರದ ಕಂಠದಿಂದ ಒಂದು ಆಕ್ರಂದನ ಹೊಮ್ಮಿತು
ಮತ್ತು ದೇವರ ಸಿಂಹಾಸನ ಅದೆಷ್ಟೋ ಹೊತ್ತು ಅಲುಗಾಡುತಿತ್ತು

ಜ್ಯಾಂ ಜೈನೆ

ಕಂದಕದಂಥ ಗರ್ಭವೊಂದಿತ್ತು
ಕಂದಕದಿಂದ ಹೊರಬರುವುದು ಕಾನೂನು ಬಾಹಿರ
ಎಂದು ಜನ ಹೇಳುತ್ತಿದ್ದರು
ಅವರ ಕಾನೂನು ರಕ್ಷಣೆಗಾಗಿ ನಾನು
ಮತ್ತೆ ಕಂದಕಕ್ಕೆ ಬೀಳಬೇಕಿತ್ತು
ತುಂಬ ಹುಡುಕಾಡಿದೆ–
ಆದರೆ ಆ ಮೊದಲ ಕಂದಕ ಎಲ್ಲೂ ಸಿಗಲಿಲ್ಲ
ಸಿಕ್ಕಿದ್ದಕ್ಕೆ ಹಾರಿಕೊಂಡೆ
ಆದರೂ ಈ ಪೋಲೀಸರೇಕೆ
ನನ್ನ ಬೆನ್ನು ಹತ್ತಿದ್ದಾರೆ?

ಚಿತ್ರಕಲಾವಿದ ಇಮ್ರೋಜ್

ನನ್ನೆದುರಿನ ಮೇಜಿನ ಮೇಲೆ ಒಂದು ಕ್ಯಾನ್‌ವಾಸ್ ಬಿದ್ದಿದೆ.
ಕ್ಯಾನ್‌ವಾಸಿನ ಮೇಲೆ ಹಚ್ಚಿರುವ ಬಣ್ಣದ ತುಣುಕು
ಒಂದು ಕೆಂಪು ಬಟ್ಟೆಯಾಗಿ
ಅಲುಗಾಡುತ್ತಿರುವಂತೆ ತೋರುತ್ತದೆ.
ಪ್ರತಿ ಮನುಷ್ಯನ ಒಳಗಿನ ಪಶು
ತನ್ನ ಕೊಂಬು ಎತ್ತುತ್ತದೆ
ಕೊಂಬು ಸೆಟೆಯುತ್ತದೆ
ಪ್ರತಿಯೊಂದು ಇಕ್ಕಟ್ಟಾದ ಬೀದಿ
ಗಲ್ಲಿ ಮಂಡಿ ಎಲ್ಲವೂ ಒಟ್ಟಾಗಿ ಒಂದು
ವರ್ತುಲವಾಗುತ್ತದೆ.
ನನ್ನ ಪಂಜಾಬಿ ನರನಾಡಿಗಳಲ್ಲಿ
'ಸಾಯುವತನಕ ಗೂಳಿ ಕಾಳಗ' ಎಂಬ ಮಿಥಕದ
ಒಂದು ಸ್ಪೈನ್ ಪರಂಪರೆ ಉಕ್ಕುತ್ತದೆ......

ಚಿತ್ರಕಲಾವಿದ ಸೋಭಾಸಿಂಹ

ಕೆಲವು ಕಿರಣಗಳ ಮತ್ತೆ ಕೆಲ ಮೀನುಗಳ ಹಿಡಿಯಲೆಂದು
ಕತ್ತಲೆಯ ಸಾಗರದಲ್ಲಿ ನಾನೊಂದು ಬಲೆಯ ಬೀಸಿದ್ದೆ
ಬಲೆಯೊಳಾದರೋ ಸೂರ್ಯನೇ ಇಡಿಯಾಗಿ ಸಿಕ್ಕಿಬಿಟ್ಟ
ಅದರ ಭಾರದಿಂದ
ಈಗ ಬಲೆಯೂ ಮುಳುಗುತ್ತಿದೆ
ನನ್ನ ಬಾಹುಗಳೂ ಮುಳುಗುತ್ತಿವೆ.......

ಹೆನ್ರೀ ಮಿಲ್ಲರ್

ವರ್ತಮಾನವೆಂಬುದೊಂದು ಬೇಯಿಸಿದ ಮೊಟ್ಟೆಯ ಹಾಗಿದೆ
ಜನ ಇದ ನೋಡಿ ಚರ್ಚಿಸುತ್ತಾರೆ
ಮತ್ತೆ ಬಾವುಟ ಹಾರಾಡಿಸುತ್ತ
ಈ ಮೊಟ್ಟೆಯಿಂದ ಭವಿಷ್ಯದ ಕೋಳಿಮರಿ
ಖಂಡಿತಾ ಹುಟ್ಟುತ್ತದೆ
ಇದು ನಮ್ಮ ಆಸೆ
ಎಂದು ಹೇಳುತ್ತಾರೆ!
ಮತ್ತು ಇದರಲ್ಲಿ ನಗುವಂಥದೇನಿದೆ ?
ಎಂದು ರೇಗಿ ಕೇಳುತ್ತಾರೆ

ಅಮೃತಾ ಪ್ರೀತಮ್

ಒಂದು ನೋವಿತ್ತು
ಸದ್ದಿಲ್ಲದೆ ನಾನದನು ಸಿಗರೇಟಿನ ಹಾಗೆ ಸೇದಿಬಿಟ್ಟೆ
ಒಂದಿಷ್ಟು ಕವಿತೆಗಳು ಮಾತ್ರ ಉಳಿದಿವೆ
ಸಿಗರೇಟಿನಿಂದ ಬೂದಿಯನು ಕೊಡಹುವಂತೆ
ಅವುಗಳನು ಕೊಡವಿರುವೆ ನಾನು.

ಒಂದು ದೃಷ್ಟಿಕೋನ

ಸೂರ್ಯನ ಎಲ್ಲ ಕೊಲೆಗಳೂ ಮಾಫಿ
ಜಗತ್ತಿನ ಎಲ್ಲ ಜನರ 'ಒಂದು ದಿನವನು' ದಿನವೂ
ಕೊಲ್ಲುತ್ತಾನವನು.
ಪ್ರತಿ ವಯಸ್ಸಿನ ಒಂದು ತುಣುಕನ್ನು ದಿನವೂ ಕತ್ತರಿಸುತ್ತಾನವನು
ಗಾಬರಿಗೊಂಡು ಕತ್ತರಿಸಲಾದ ತುಣುಕನ್ನು ಎಸೆದು
ಹೆದರುತ್ತ ಕೂರುವುದು ಇಲ್ಲವೆ
ಹೆದರದೆ ಕಬಾಬ್ ಮಾಡಿಕೊಂಡು ತಿಂದು
ಉಸಿರಿನ ಹೆಂಡ ಕುಡಿಯುತ್ತ ಇನ್ನೊಂದು ತುಣುಕಿಗಾಗಿ
ಕಾದು ಕೂರುವುದು ಅಷ್ಟು ಮಾತ್ರವೆ
ಮನುಷ್ಯನ ಸಾಮರ್ಥ್ಯದಲ್ಲಿರುವುದು........

ಆತ್ಮಮಿಲನ

ನನ್ನ ಹಾಸಿಗೆ ಸಿದ್ಧವಿದೆ
ಚಪ್ಪಲಿಗಳು ಮತ್ತು ಅಂಗಿಯನು ಕಳಚುವ ಹಾಗೆ
ನೀನು ನಿನ್ನ ದೇಹವನ್ನೂ ಕಳಚಿ
ಅತ್ತ ಬತ್ತದ ಅರಳಿನ ಮೇಲೆ ಇಟ್ಟುಬಿಡು
ಅಂಥದೇನೂ ವಿಶೇಷವಿಲ್ಲ-
ಇದು ಕೇವಲ ನಮ್ಮ ದೇಶದ ವಾಡಿಕೆ

ವಿಶ್ವಾಸ

ಕಡು ಕಪ್ಪನೆಯ ವದಂತಿಯೊಂದು
ಬಾವಲಿಯ ಹಾಗೆ ನನ್ನ ಕೊಠಡಿಗೆ ಹಾರಿಬಂದಿದೆ
ಗೋಡೆಗಳಿಗೆ ಡಿಕ್ಕಿಹೊಡೆಯುತ್ತ
ಕಂಡಿ, ತೂತು ಸುರಂಗಗಳ ಹುಡುಕಾಡುತ್ತಿದೆ
ಆದರೆ ಕಣ್ಣುಗಳ ಕಪ್ಪು ಓಣಿಗಳ
ಕೈಗಳಿಂದ ಮುಚ್ಚಿಕೊಂಡಿರುವೆ
ನಿನ್ನ ಪ್ರೀತಿಯ ಕಿವಿಗಳಲಿ ಹತ್ತಿ ತುರುಕಿರುವೆ ನಾನು.

ರಾಜಕೀಯ

ರಾಜಕೀಯವೆಂಬುದೊಂದು ಕ್ಲಾಸಿಕ್ ಫಿಲ್ಮ್
ಎಂದು ಕೇಳಿದ್ದೇನೆ
ಅದರ ಹೀರೋ: ಪ್ರತಿದಿನ ತನ್ನ ಹೆಸರು ಬದಲಾಯಿಸುವ
ಬಹುಮುಖ ಪ್ರತಿಭೆಯ ಮಾಲೀಕ
ಹೀರೋಯಿನ್: ಆಜ್ಞೆ ಮಾಡುವ ಅಧಿಕಾರದ ಕುರ್ಚಿಯೇ ಅವಳು
ಎಕ್ಸ್ಟ್ರಾ: ರಾಜ್ಯಸಭೆ ಮತ್ತು ಲೊಕಸಭೆಯ ಮೆಂಬರ್‌ಗಳು
ಫೈನಾನ್ಸಿಯರ್ಸ್: ದಿನಗೂಲಿಗಳು ಮತ್ತು ರೈತರು
(ಅವರು ಫೈನಾನ್ಸ್ ಮಾಡುವುದಿಲ್ಲ, ಮಾಡಿಸಲಾಗುತ್ತದೆ)
ಸಂಸತ್ತು: ಇನ್ ಡೋರ್ ಶೂಟಿಂಗ್ ನಡೆಯುವ ಸ್ಥಳ
ಪತ್ರಿಕೆಗಳು: ಔಟ್ ಡೋರ್ ಶೂಟಿಂಗ್ ಸಾಧನಗಳು
ಈ ಫಿಲ್ಮ್ ಅನ್ನು ನಾನು ನೋಡಿಲ್ಲ
ಕೇವಲ ಕೇಳಿದ್ದೇನೆ
ಕಾರಣ ಇದು "ನಾಟ್ ಫಾರ್ ಅಡಲ್ಟ್ಸ್" ಎಂದು ಸೆನ್ಸಾರ್
ಹೇಳುತ್ತದೆ

?

ಸೂರ್ಯ ಚಂದ್ರರ ರಕ್ಷಾಪುಟವುಳ್ಳ
ಭೂಮಿ ಒಂದು ಸುಂದರ ಪುಸ್ತಕ
ಆದರೆ ಇದರಿಂದ ಅಗೆದು ತೆಗೆದ ಉತ್ಖನನಗಳಾದರೋ
ಈ ದುಃಖ, ಹಸಿವು, ಭಯ ಮತ್ತು ದಾಸ್ಯ
ಇದು ನಿನ್ನ ರಚನೆಯ ರೀತಿಯೆ?
–ಅಥವಾ ಕರಡು ಪ್ರತಿಯ ತಪ್ಪುಗಳೆ?

ರಾಜಸತ್ತೆ

ಒಂದು ಯುದ್ಧಗಳ ಕಾರ್ಖಾನೆ
ಅದರ ಚಿಮಣಿಗಳಿಂದ ದಿನವೂ ಹಾಹಾಕಾರ, ಚೀರುಗಳ ಹೊಗೆ
ಹೊಮ್ಮುತ್ತಿದೆ
ರಾಜಸತ್ತೆ ಇದೇ ಕಾರ್ಖಾನೆಯಲ್ಲಿ ತಯಾರಾಗುತ್ತದೆ
ಜನರು– ಮಜ್ಜೆ ಮಾಂಸಗಳು– ಕೇವಲ ಅದರ ಕಚ್ಚಾ ಮಾಲುಗಳು
ರಾಜಕೀಯದ ವ್ಯಾಪಾರಿಗಳು ಬಹು ಕಾಲದಿಂದ ಖರೀದಿಮಾಡಿ
ಕಾರ್ಖಾನೆಯ ಕುಲುಮೆಗಳ ಮೇಲೆ ಬೇಯಿಸಿಕೊಳ್ಳುತ್ತಿದ್ದಾರೆ
ದೇವರು: ಮಜ್ಜೆ ಮಾಂಸಗಳ ಒಬ್ಬ ದಲ್ಲಾಳಿ ಅಷ್ಟೆ.

ಭಾಷಣ

ಆಲೋಚನೆಗಳಿಂದ ಶಬ್ದಗಳು ಡೈವೋರ್ಸ್ ತೆಗೆದುಕೊಂಡಾಗ
ಸಂತೆಯಲ್ಲಿ ಒಂದು ವೇದಿಕೆಯ ಮೇಲೆ ಮೈಕ್ ಇಟ್ಟುಕೊಂಡು
ಕುಳಿತುಬಿಡುತ್ತವೆ.
ಜನತೆಯ ಬೇಡಿಕೆಗಳು– ಮದುವೆಯಾಗದ ಕನ್ಯೆಯರು.
ಅತ್ತಿತ್ತ ಕಣ್ಣು ಹಾಯಿಸುತ್ತ
ಆ ಪ್ರೇಮಿನಿಯರು ವೈಯಾರದಲ್ಲಿ ಮುಗುಳ್ನಗುತ್ತಾರೆ
ಮತ್ತು ಈ ಮಕ್ಕಳು ಹೆದರಬೇಕಿಲ್ಲ,
ಹಿಂದು ಮುಂದು ಕೂಡ ನೋಡಬೇಕಿಲ್ಲ
ಏನೂ ಭರವಸೆಗಳ ತಾಳಬೇಕಿಲ್ಲ
ಕಾರಣ ಈ ಶಬ್ದಗಳು, ಅವುಗಳನ್ನು ಉಚ್ಚರಿಸುವ ಈ ತುಟಿಗಳು
–ಎಲ್ಲವೂ .....ಹೋಮೋ..ಗಳು

ಮನೆ

ಕೆಮ್ಮು, ಧೂಳು, ಸೊಳ್ಳೆ, ನೊಣಗಳು, ಜೂಜುಗಳು
ಕಸದ ರಾಶಿ, ಮತ್ತು ಅಸ್ತಿ ಪಂಜರ
ಎಲ್ಲವನ್ನೂ ನಾವು ವಿರೋಧಿಸುತ್ತೇವೆ.
ಮತ್ತು ಈ ಮನೆ ನಮಗೆ ಅಲಾಟಾಗಿದೆ ಎಂದು ಹೇಳುತ್ತೇವೆ.
ಕೆಲವೊಂದು ಕನಸುಗಳು ರಾತ್ರಿಗಳನು ಗುಡಿಸಿಲುಗಳಾಗಿ ಮಾಡಿವೆ
ಈ ಗುಡಿಸಿಲುಗಳನೆತ್ತಿಕೋ
ಏಕೆಂದರೆ ಇವೆಲ್ಲ ಅನಾಥರ್ರೈಸ್ಡ್.

ಒಂದೂವರೆ ಗಂಟೆಯ ಭೇಟಿ

ಒಂದೂವರೆ ಗಂಟೆಯ ಭೇಟಿ
ಮೋಡದ ತುಣುಕೊಂದು
ಇಂದು ಸೂರ್ಯನೊಂದಿಗೆ ಸೇರಿಕೊಂಡಾಗ
ನನ್ನ ಬುದ್ಧಿಯೇ ಸೋತುಹೋಯಿತು
ಏನೂ ಆಗುವುದಿಲ್ಲ,
ಸೂರ್ಯನ ಕೆಂಪು ಷರ್ಟಿನಲ್ಲಿ
ಯಾರೋ ಈ ಮೋಡವನು ನೆಯ್ದಿದ್ದಾರೆನಿಸುತ್ತದೆ

ಒಂದೂವರೆ ಗಂಟೆಯ ಭೇಟಿ
ಎದುರಿನ ಆ ಚೌಕದಲ್ಲಿ
ಒಬ್ಬ ದ್ವಾರಪಾಲಕಳಂತೆ ನಿಂತೆ
ಕೈ ಅಡ್ಡ ನೀಡಿ ನನ್ನ ಆಲೋಚನೆಗಳು
ಮುಂದೆ ಸಾಗುವುದನ್ನು ಅವನು ನಿಲ್ಲಿಸಿಬಿಟ್ಟ
ನಾನು ಏನು ಹೇಳಿದ್ದೆನೋ ಆ ದೇವರೆ ಬಲ್ಲ
ನೀನು ಏನು ಕೇಳಿಸಿಕೊಂಡೆಯೋ ಆ ದೇವರೆ ಬಲ್ಲ

ಒಂದೂವರೆ ಗಂಟೆಯ ಭೇಟಿ
ನನ್ನ ಯೋಚನೆ ಗಾಬರಿಗೊಂಡು
ತಪ್ಪು ತಿರುವಿಗೆ ಹೊರಳುವ ಮುನ್ನ
ಮೋಡವನು ಕಳಚುತ್ತ
ಈ ಸೂರ್ಯ ಮುಳುಗಿಹೋಗುವ ಮುನ್ನ
ಭೇಟಿಯ ನೆನಪು ಒಂದು ತಿರಸ್ಕಾರಕ್ಕೆ ತಿರುಗುವ ಮುನ್ನ
ಆದಿವಾಸಿ ಹೆಣ್ಣಿನಂತೆ ನಾನೊಂದು

ಹುಕ್ಕಾ ಹಚ್ಚಿಕೊಂಡು
ಒಂದೂವರೆ ಗಂಟೆಯ ತನಕ
ತಂಬಾಕನ್ನು ಬೆಂಕಿಯಲ್ಲಿ ಇಟ್ಟುಕೊಂಡು
ಸೇದಿಬಿಡಲೆ
ಎಂದು ಯೋಚಿಸುತ್ತೇನೆ

ಇದರ ಶಬ್ದ ನನ್ನ ಇಲ್ಲ ನಿನ್ನ
ನಾಲಿಗೆಯ ಮೇಲೆ ಬರುವ ಮುನ್ನ
ನನ್ನ , ಇಲ್ಲ ನಿನ್ನ ಕಿವಿ
ಇದರ ವರ್ಣನೆಯನ್ನು ಕೇಳುವ ಮುನ್ನ
ಒಂದೂವರೆ ಗಂಟೆಯ ಈ ಹೊಗೆಯನ್ನು
ಗಾಳಿ ಸ್ವಲ್ಪ ಕುಡಿದು
ನಾನು ಸ್ವಲ್ಪ ಕುಡಿದುಬಿಡಲೆ

ಪುರುಷ ಹೆಣ್ಣು ಜಾತಿಯ ಅವಮಾನವೆನಿಸುವ ಮುನ್ನ
ಹೆಣ್ಣು ಪುರುಷ ಜಾತಿಯ ಅವಮಾನದ
ಕಾರಣವೆನಿಸುವ ಮುನ್ನ
ಇದಕಿಂತ ಮುನ್ನ..... ಇದಕಿಂತ ಮುನ್ನ.....

ಹ್ಯಾಂಗ್ ಓವರ್

ಎಲ್ಲ ದಿನಪತ್ರಿಕೆಗಳ ಕತ್ತರಿಸಿದ ತುಣುಕುಗಳು
ಇಂದು ಖಾಲಿ ಬಾಟಲ್‌ಗಳ ಹಾಗೆ ಬೋರಲಾಗಿ ಬಿದ್ದಿವೆ
ನನ್ನ ಗಂಟಲು ಒಣಗುತ್ತಿದೆ
ಇಡೀ ದೇಹ ನಿನ್ನೆ ರಾತ್ರಿ ಕುಡಿದ ಕನಸುಗಳ
ಹ್ಯಾಂಗ್ ಓವರ್‌ನ ಹಾಗೆ ಕುಸಿದು ಬೀಳುತ್ತಿದೆ........

ಬಾಂಗ್ಲಾ ದೇಶ: ಎರಡು ಕವಿತೆಗಳು

1

ಇಂದು
ಒಂದು ಊಟದ ಹಾಸಿನ ಮೇಲೆ
ಜೀವನದ ಔತಣವಿದೆ
ಇನ್ನೊಂದು ಊಟದ ಹಾಸಿನ ಮೇಲೆ
ಮರಣದ ಔತಣವಿದೆ
ಗೌರವಾನ್ವಿತ ಅತಿಥಿಗಳೇ ನಿಮ್ಮ ಇಷ್ಟ ಏನೆಂದು ಹೇಳಿ !
ಜೀವನದ ಊಟದ ಹಾಸನು ಸಜ್ಜುಗೊಳಿಸಿ
ಆದರೆ ಮೊದಲ ತುತ್ತು ಮರಣದ ಕೈಯಿಂದ
ಮೊದಲ ಬಟ್ಟಲು ಮರಣದ ಕೈಯಿಂದ
ಎಂದು ಆಡಳಿತದ ಒಂದು ಶರತ್ತಿದೆ!
ಹಾಗೆಂದು ಶಾಸನದ ಒಂದು ಆದೇಶವಿದೆ!

2

ಇಂದಿನ ಸುದ್ದಿಯೆಂದರೆ–
ಈ ಭೂಮಿಯ ಮೇಲೆ ನಾವೊಂದು
ಮಾಯದ ಹಳ್ಳವನು ಕಂಡುಹಿಡಿದಿದ್ದೇವೆ
ಮದ್ದು ಗುಂಡುಗಳು ತುಂಬಿದ ಹಡಗು
ಈ ಹಳ್ಳದಲ್ಲಿ ಸಾಗಿ ಹೋದರೆ
ಕ್ಷೇಮವಾಗಿ ಹೋಗಿಬಿಡುತ್ತದೆ
ಚೀರು ಹಾಹಾಕಾರಗಳು ತುಂಬಿದ ಹಡಗು
ಇದರ ಮೇಲೆ ಸಾಗಿಹೋಯಿತೋ
ಅದು ಇದೇ ಹಳ್ಳದಲಿ ಬಿದ್ದುಬಿಡುತ್ತದೆ.........

ಬದುಕು

ಒಬ್ಬ ಮನುಷ್ಯ ಎದ್ದು ಕೂತು ಮಾಡಲೆಂದು
ಮತ್ತು ಆರಾಮವಾಗಿ ನಿದ್ರಿಸಲೆಂದು
ಆರು ಹೆಜ್ಜೆ ಉದ್ದ ಮತ್ತು ಒಂದೂವರೆ ಹೆಜ್ಜೆ
ಅಗಲದ ಒಂದು ಜೈಲು ಕೋಣೆ

'ದೇವರು' ಒಂದು ಹಳಸಿದ ರೊಟ್ಟಿ
'ಸಹನೆ' ಯೆಂಬುದು ಅರೆಬೆಂದ ಪಲ್ಯ
ಇಷ್ಟಪಟ್ಟರೆ ಅವನು ಎರಡೂ ಹೊತ್ತು
ಮನಃ ಪೂರ್ತಿ ಉಣ್ಣಬಹುದು

ಮನುಷ್ಯ ಪ್ರಾಣಿ ಕೈ-ಕಾಲು ಮುಖ
ತೊಳೆಯಲೆಂದು ಮತ್ತು
ಕೈಯಿಂದ ಸೊಳ್ಳೆ ಓಡಿಸಿ
ಬೊಗಸೆ ಭರ್ತಿ ಕುಡಿಯಲೆಂದು
ಜೈಲಿನ ಅಂಗಳದಲ್ಲಿ
ಒಂದು 'ಜ್ಞಾನ'ದ ಹೊಂಡ
ಆತ್ಮಕ್ಕೆ ಗಾಯವೆಂಬುದು
ಒಂದು ಮಾಮೂಲಿ ರೋಗ

ಗಾಯದ ಬೆತ್ತಲೆಗೆ
ಬಹಳ ನಾಚುವವರು
ಕನಸಿನ ಒಂದು ತುಣುಕನ್ನು ಹರಿದು
ಗಾಯವನ್ನು ಮುಚ್ಚಿಕೊಳ್ಳಬಹುದು

ಜೈಲಿನ ಈ ಸಂಗತಿ ಕುರಿತು
ಯಾರೂ ಬಾಯಿ ಬಿಡುವುದಿಲ್ಲ
ಮತ್ತು ಈ ಜಗದ ಪ್ರತಿಯೊಂದು ಬಂಡಾಯ
ಜ್ವರದ ಹಾಗೆ ಏರುತ್ತದೆ
ಹಾಗೂ ಜ್ವರ ಏರುತ್ತದೆ ಮತ್ತೆ ಇಳಿದುಹೋಗುತ್ತದೆ ಎಂದು
ಯಾರೂ ಎಂದೂ ಹೇಳುವುದಿಲ್ಲ-

ಒಂದು ವೇಳೆ ಮನುಷ್ಯನಿಗೆ ಎಂದೆಂದೂ
ಆಶೆಯ ಕ್ಯಾನ್ಸರ್ ಆಗದೆ ಇದ್ದರೆ.......

ಪದಕಗಳು

ಭಾರಿ ಬಹದ್ದೂರರು ನನ್ನ ದೇಶದ ಜನರು
ಭಾರಿ ಬಹದ್ದೂರು ನಿನ್ನ ದೇಶದ ಜನರು
ಇವರಿಗೆಲ್ಲ ಸಾಯುವುದು–ಸಾಯಿಸುವುದು ಗೊತ್ತು
ತಲೆಗಳ ಬಲಿಕೊಡುವುದು ಗೊತ್ತು
ಆದರೆ ಆ ತಲೆಗಳು ಎಂದೂ ತಮ್ಮದಾಗಿರುವುದಿಲ್ಲ
ಎಂಬುದು ಬೇರೆ ಮಾತು

ಜೀವಿಯದೊಂದು ಕಳೇಬರವಿರುತ್ತದೆ
ಆದರೆ ದೇವರ ಕಳೇಬರವಿರುವುದಿಲ್ಲ
ಜೀವಿಯೊಳಗಿನ ದೇವರ ತುಣುಕು ಸತ್ತರೆ
ಎಂದೂ ದುರ್ನಾತ ಬರುವುದಿಲ್ಲ

ಯಾರ ಪ್ರೇಮಿಗಳು ಯಾರೂ ಅಲ್ಲ
ಆದರೆ ರಖಾವಿಗೇನೂ ಭಯವಿಲ್ಲ
ಯಾವುದೆ ನೋವಿನ ಭಯವಿಲ್ಲ

ದೊಡ್ಡದಾದ ಗೆರೆ ಮಾತ್ರ
ಇವರನ್ನು ಅಪಮಾನಿಸುತ್ತದೆ
ಗೆರೆ ಎಲ್ಲರನ್ನೂ ಅಳೆವ ಮಾನದಂಡವಲ್ಲ ಎಂದು
ಇವರು ಗೆರೆಯನ್ನೆ ಅಳಿಸಿಬಿಡುತ್ತಾರೆ
ಪೂರ್ತಿ ಗೆಲುವು ನಿರ್ವಿಘ್ನ
ಪೂರ್ತಿ ಉತ್ಸವವೂ ನಿರ್ವಿಘ್ನ

ಕಾಲ ಮುಗುಳ್ನಗುತ್ತಿದೆ-
ಮತ್ತು ಇವರೆದೆಯ ಮೇಲೆ ಮೆರೆಯುತ್ತಿವೆ
ಷಂಡ ಸಾಹಸದ ಅವೆಷ್ಟೋ ಪದಕಗಳು......

ಒಂದು ಯೋಚನೆ

ಭಾರತದ ಬೀದಿಗಳಲ್ಲಿ ಅಲೆದಾಡುವ ಗಾಳಿ
ಒಲೆಯ ಆರುತ್ತಿರುವ ಬೆಂಕಿಯನ್ನು ಕೆದರುತ್ತದೆ
ಸಾಲವಾಗಿ ಕೊಂಡ ಒಂದು ತುತ್ತು ಅನ್ನವನು ಕದಲಿಸುತ್ತದೆ
ಮತ್ತು ಮಂಡಿಯ ಮೇಲೆ ಕೈಯೂರಿ ಮತ್ತೆ ಮೇಲೇಳುತ್ತದೆ......

ಚೀಣಾದ ಕಾಂತಿಹೀನ ಹಳದಿ ತುಟಿಗಳ ಚರ್ಮ
ಬಿಕ್ಕುತ್ತ ಇಂದು ಒಂದು ದನಿಯೆತ್ತುತ್ತದೆ
ಅದು ಹೋಗಿ ಪ್ರತಿಯೊಂದು ಕಂಠದಲ್ಲಿ ಒಣಗುತ್ತದೆ
ಮತ್ತು ಚೀರಾಡುತ್ತ ವಿಯತ್‌ನಾಮ್‌ನಲ್ಲಿ ಬೀಳುತ್ತದೆ.....

ಮಸಣದ ಮನೆಗಳಿಂದ ವಾಸನೆಯೊಂದು ಹೊಮ್ಮುತ್ತದೆ
ಸಾಗರದ ತೀರದಲಿ ಕುಳಿತ ಮಸಣದ ಮನೆಗಳ ಮಾಲೀಕರು
ಬಂದೂಕಿನ ಮದ್ದಿನ ಈ ವಾಸನೆಯನ್ನು ಮದ್ಯದ
ವಾಸನೆಯಲ್ಲಿ ತೋಯಿಸುತ್ತಾರೆ.

ಮಸಣದ ಮನೆಗಳ ಅನ್ಯ ಮಾಲೀಕರು ಥೇಟು
ಹಸಿವಿನ ವಾಸನೆಯನ್ನು ಅದೃಷ್ಟದ ವಾಸನೆಯಲ್ಲಿ
ತೋಯಿಸುವ ಹಾಗೆ
ಇತರೆಯವರ ಸಂಕಷ್ಟಗಳ ವಾಸನೆಯನ್ನು
ಮಾತಿನ ವಾಸನೆಯಲ್ಲಿ ತೋಯಿಸುತ್ತಾರೆ

ಮತ್ತು ಅರಬ್ಬರ ರಕ್ತದಲ್ಲಿ ತೋಯುವ
ಇಸ್ರೇಲಿನ ಹೊಸ ಮಣ್ಣು

ಅಥವಾ ಹಳೆಯ ಮರಳು ಅಲ್ಲದೆ
ಮದ್ಯದ ಬಟ್ಟಲಿನಲ್ಲಿ ವ್ಯರ್ಥ ಮುಳುಗುವ ಹುತಾತ್ಮತೆಯ
ವಾಸನೆ.....

ಎದೆಯ ಓಣಿಗಳಲ್ಲಿ ಅಲೆದಾಡುತ್ತಿರುವ ಎಲರು
ಈ ಎಲ್ಲ ವಾಸನೆಗಳನು ಮೂಸುತ್ತ
ಭೂಮಿಯ ಅಂಗಳದಲಿ ಸೂತಕದ ವಾಸನೆ
ಯಾವಾಗ ಬರುವುದೆಂದು
ಯಾವುದಾದರೊಂದು ಇಡಾ – ಯಾವುದಾದರೊಂದು
ಹಣೆಯ ನಾಡಿ ಯಾವಾಗ ಗರ್ಭವತಿಯಾದೀತೆಂದು
ಯೋಚಿಸುತ್ತದೆ
ಗುಲಾಬಿ ಮಾಂಸದ ಕನಸು–
ಇಂದು ಶತಮಾನಗಳ ಜ್ಞಾನವನು
ವೀರ್ಯದ ಹನಿಯೊಂದ ಬೇಡುತಿದೆ.......

ನಗರ

ನನ್ನ ನಗರವೆಂದರೆ ಒಂದು ದೀರ್ಘ ಚರ್ಚೆಯಂತೆ
ರಸ್ತೆಗಳಾದರೋ ಅಸಂಬದ್ಧ ವಾದಗಳ ಹಾಗೆ
ಇನ್ನು ಗಲ್ಲಿಗಳಂತೂ ಒಂದೇ ವಿಷಯವನ್ನು ಒಬ್ಬರು ಅತ್ತ ಜಗ್ಗಿದರೆ
ಇನ್ನೊಬ್ಬರು ಇತ್ತ ಜಗ್ಗಿದಂತೆ.

ಒಂದೊಂದು ಮನೆಯು ಒಂದು ಮುಷ್ಟಿಯ ಹಾಗೆ
ಬಿಗಿದುಕೊಂಡಿದೆ
ಗೋಡೆಗಳು......ಹಲ್ಲು ಮಸೆಯುತ್ತಿರುವಂತೆ
ನಾಡಿಗಳು ಬಾಯಿಂದ ನೊರೆನೊರೆಯಾಗಿ ಹರಿಯುವಂತೆ

ಈ ಚರ್ಚೆ ಸೂರ್ಯನಿಂದ ಆರಂಭವಾಗಿರಬೇಕು
ಅವನನ್ನು ಕಂಡದ್ದೇ ಅದಕ್ಕೆ ಇನ್ನಷ್ಟು ಬಿಸುಪೇರಿತ್ತು
ಪ್ರತಿಯೊಂದು ಬಾಗಿಲಿನ ಬಾಯಿಂದ
ಸೈಕಲ್ ಮತ್ತು ಸ್ಕೂಟರಿನ ಚಕ್ರಗಳು
ಬೈಗುಳಗಳ ಹಾಗೆ ಹೊರಬರುತ್ತವೆ
ಬೆಲ್ಲುಗಳು ಮತ್ತು ಹಾರನ್‌ಗಳು
ಒಂದು ಇನ್ನೊಂದರ ಮೇಲೆ ಮುಗಿಬೀಳುತ್ತವೆ

ಈ ನಗರದಲ್ಲಿ ಹುಟ್ಟಿದ ಪ್ರತಿಯೊಬ್ಬ ಬಾಲಕನೂ
ಈ ಚರ್ಚೆ ಯಾವುದರ ಬಗ್ಗೆ ಆಗುತ್ತಿದೆ
ಎಂದು ಕೇಳುತ್ತಾನೆ
ಆಮೇಲೆ ಅವನ ಪ್ರಶ್ನೆಯೂ ಒಂದು ಚರ್ಚೆಯಾಗುತ್ತದೆ

ಚರ್ಚೆಯಿಂದ ಹೊರಟು ಚರ್ಚೆಯಲ್ಲಿ ಸೇರಿಕೊಳ್ಳುತ್ತ
ಶಂಖ ಘಂಟೆಗಳ ಉಸಿರು ಒಣಗಿ ತಾರಾದವು
ರಾತ್ರಿ ಬಂದು ತಲೆಮೇಲೆ ಕೈಯಿಟ್ಟು ಹೊರಟುಹೋಗುತ್ತದೆ
ಆದರೆ ನಿದ್ರೆಯಲ್ಲೂ ಚರ್ಚೆ ಮುಗಿಯುವುದಿಲ್ಲ
ನನ್ನ ನಗರವೆಂದರೆ ಒಂದು ದೀರ್ಘ ಚರ್ಚೆಯಂತೆ......

ಒಂದು ಪತ್ರ

ನಾನು– ಗೂಡಿನಲ್ಲಿ ಬಿದ್ದಿರುವ ಒಂದು ಪುಸ್ತಕ.
ಬಹುಶಃ ಸಂತವಾಣಿಯೋ ಇಲ್ಲ ಭಜನಮಾಲೆಯೋ
ಅಥವಾ ಕಾಮಸೂತ್ರದೊಂದು ಕಾಂಡವೋ
ಇಲ್ಲ ಕೆಲ ಆಸನಗಳೋ ಮತ್ತೆ ಕೆಲ ಗುಪ್ತ ರೋಗಗಳ
ಮಾಯಕಾರನೊ?
ಆದರೆ ಇದಾವುದೂ ನಾನಲ್ಲವೆನಿಸುತ್ತದೆ
(ಆಗಿದ್ದರೆ ಯಾರಾದರೂ ಖಂಡಿತಾ ಓದುತ್ತಿದ್ದರು)

ಕ್ರಾಂತಿಕಾರಿಗಳ ಸಭೆಯಲ್ಲಿ ಮಂಡಿಸಲಾದ
ಪ್ರಸ್ತಾವದ ನಕಲೇ ಇರಬೇಕು ನಾನು ಎನಿಸುತ್ತದೆ
ಮತ್ತೆ ಪೋಲೀಸರು ಮುದ್ರಿಸಿ
ಸಭೆಯಲ್ಲಿ ಪಾಸಾದ ಪ್ರಸ್ತಾವ ಎಂದೂ
ಜಾರಿಗೆ ಬರಲೇ ಇಲ್ಲ
ಕಾರ್ಯಾಚರಣೆಯ ಸಲುವಾಗಿ ಸಂರಕ್ಷಿಸಿ ಇಡಲಾಯಿತು

ಈಗ ಕೆಲವು ಪಕ್ಷಿಗಳು ಮಾತ್ರ ಬರುತ್ತವೆ
ಕೊಕ್ಕಿನಲಿ ಒಂದಿಷ್ಟು ಹುಲ್ಲು ಕಡ್ಡಿ ತರುತ್ತವೆ
ನನ್ನ ಮೈಮೇಲೆ ಕೂತು
ತಮ್ಮ ಎರಡನೇ ಪೀಳಿಗೆಯ ಕುರಿತು ಚಿಂತಿಸುತ್ತವೆ
(ಎರಡನೇ ಪೀಳಿಗೆ ಕುರಿತ ಚಿಂತೆ ಅದೆಂಥ ಸುಂದರ ಚಿಂತೆ !)
ಏನೇ ಪ್ರಯತ್ನವಾದರೂ ಪಕ್ಷಿಗಳಿಗೆ ರೆಕ್ಕೆ ಇರುತ್ತವೆ
ಆದರೆ ಯಾವುದೇ ಪ್ರಸ್ತಾವಕ್ಕೆ ರೆಕ್ಕೆ ಇರುವುದಿಲ್ಲ
(ಅಥವಾ ಯಾವುದೇ ಪ್ರಸ್ತಾವಕ್ಕೆ ಯಾವುದೇ ಎರಡನೇ ಪೀಳಿಗೆ
ಇರುವುದಿಲ್ಲವೇನೋ?)

ನನ್ನ ಭವಿಷ್ಯವೆಲ್ಲಿದೆ ಎಂದು ಮೂಸಿ ನೋಡಲೆ
ಎಂದು ಯಾವಾಗಲಾದರೊಮ್ಮೆ ಚಿಂತಿಸುವೆ
ಈ ಚಿಂತೆಯಲ್ಲಿ ನನ್ನ ಮೈಯ ಹೊದಿಕೆ ಸ್ವಲ್ಪ ಸರಿಯುತ್ತದೆ.
ಯಾವಾಗ ಕಿಂಚಿತ್ ಮೂಸಲೆಂದು ಬಯಸಿದರೂ
ಬರೀ ಹಿಕ್ಕೆಗಳ ವಾಸನೆಯಷ್ಟೆ ಬರುತ್ತದೆ......
ಓ ನನ್ನ ಭೂಮಿಯ ಭವಿಷ್ಯಗಳೇ
ನಾನು ನಿಮ್ಮ-ವರ್ತಮಾನದ ಸ್ಥಿತಿ

ಇಂದಿರಾಜೀ

ಈ ಒಂದು ರಾತ್ರಿ –
ಸೂರ್ಯನನ್ನು ಹುಡುಕಲು ಹೊರಟಿದ್ದಾರೆ...
ಒಂದು ಕ್ಷಣಕಾಲ ನನ್ನ ಹಣೆಯ ಬೆಂಕಿಯನು ಹುರಿಗೊಳಿಸಿ
ಆ ಕತ್ತಲೆಯ ಅಪರಾಧಕ್ಕೆ ಕ್ಷಮೆಯಿರಲೆಂದು
ನಾನೊಬ್ಬಳೇ ಒಂದು ಪ್ರಾರ್ಥನೆಯಾಗಿ–
ಈ ಹಾದಿಯಲಿ ನಿಂತಿದ್ದೆ !
ಕೋಟಿ ಕೋಟಿ ಕೈಗಳು ಮೇಲೆದ್ದಿವೆಯಲ್ಲಾ
ಇದೆಂಥ ಚಮತ್ಕಾರ !
ಅವರು ನನ್ನೊಡನೆ ಸೇರಿಕೊಂಡು
ಈ ಕೋರಿಕೆ ಸಲ್ಲಿಸಿದ್ದಾರೆ
ಈ ಒಂದು ರಾತ್ರಿ ನನ್ನ ಅಂಗಗಳ ಮೂಲಕ ಸಾಗಿಹೋಗಿದ್ದಾರೆ......

ಅಕ್ಷರ

ಕಲ್ಲುಗಳ ನಗರವೊಂದಿತ್ತು
ಸೂರ್ಯವಂಶದ ಕಲ್ಲು
ಚಂದ್ರವಂಶದ ಕಲ್ಲು
ಆ ನಗರದಲ್ಲಿರುತ್ತಿದ್ದವು

ಅನ್ಯಾಯಿ ರಾಜರುಗಳ ಆಳ್ವಿಕೆ ಅದಾಗಿತ್ತು
ರಾಜರಿಗೆ ಕಿವಿಗಳೂ ಇರಲಿಲ್ಲ
ಪ್ರಜೆಗಳಿಗೆ ದನಿಯೂ ಇರಲಿಲ್ಲ
ಎಂದು ಹೇಳುತ್ತಾರೆ

ಆಗಲೆ–
ಆ ಜನಗಳು ಅತ್ತಾಗಲೇ
ಅವರು ಕಲ್ಲಿನಿಂದಾಗಿದ್ದರು

ಕಲ್ಲಿನ ದೇವರುಗಳು
ಕಲ್ಲಿನ ಪೂಜಾರಿಗಳು
ಮಿಲನದ ಅಂಗಸ್ಪರ್ಶವಾಗುತ್ತಿರಲಿಲ್ಲ
ಹಾಗಾಗಿ ವಿರಹಭಂಗವೂ ಆಗುತ್ತಿರಲಿಲ್ಲ.......

ಕಲ್ಲಿನ ನಗರದಲ್ಲಿ
ಸೂರ್ಯನ ಕುದುರೆ
ಕೆನೆಯುತಿತ್ತು
ಕಲ್ಲಿನ ಮೇಲೆ ಕಾಲು ಘಟ್ಟಿಸುತ್ತ

ಮೋಡಗಳ ಆನೆಗಳು ಘೀಳಿಡುತ್ತಿದ್ದುವು
ಕಲ್ಲುಗಳನ್ನು ಕಾಲುಗಳಿಂದ ಕೀಳುತ್ತ
ರಾತ್ರಿಗಳ ಅಂಧಕಾರ ಘೂತ್ಕರಿಸುತಿತ್ತು
ಕಲ್ಲುಗಳ ಮೇಲೆ ಕುಂಡಲಿಯಿಂದ ಹೊಡೆಯುತಿತ್ತು?
ಅಧಿಕಾರಿಗಳ ಆ ಆಜ್ಞೆ
ನೂರನಲವತ್ತೆರಡನೆಯ ಸಲದ್ದು ....
ಹೃದಯಗಳ ಮೂಲೆಯಲ್ಲಿ
ಎದೆಯ ಸಂತಸದಂಥ
ಹಳದಿಯ ಪುಷ್ಪ-ಪತ್ರವೊಂದು ಅರಳಿತೆಂದರೆ
ಅಥವಾ ಹಸಿರು ಗರಿಕೆಯೊಂದು
ಕಲ್ಲೊಂದರಿಂದ ಹೊಮ್ಮಿತೆಂದರೆ
ಋಷಿಯ ತಪೋಭಂಗವಾದಂತೆ
ಕಲ್ಲುಗಳು ಬೆಚ್ಚಿ ಬೀಳುತ್ತಿದ್ದುವು.......

ಬದುಕು ಆರುತಿತ್ತು ಮತ್ತು ಉರಿಯುತಿತ್ತು
ಇಂಥ- ಕಲ್ಲುಗಳ ನಗರದಲ್ಲಿ
ಕಲ್ಲುಗಳ ವಂಶ ವೃದ್ಧಿಯಾಗುತಿತ್ತು.......

ಒಂದು ಶಿಲೆ
ಇನ್ನೊಂದು ಕಲ್ಲು

ಅವು ಆ ನಗರದಲ್ಲಿ
ಸೇರಬೇಕೆಂದು ಬರೆದಿತ್ತು-
ಅವು ಜೊತೆಗೂಡಿ
ತಿನ್ನಬಾರದ ಹಣ್ಣೊಂದ ತಿಂದಿದ್ದವು
ನಾನು ಈಗಲೂ ಕುಳಿತೆನೆಂದರೆ-
ನಾನು ಕೂಡ ಒಂದು ಹಸಿರೆಲೆಯಾಗಿದ್ದರೆ
ಅವರುಗಳ ದೇಹದ ನಿಶ್ವಾಸ-

ಒಂದು ಹಸಿರ ಚಿಗುರು
ಅವುಗಳ ಎದೆ ನನಗೆ ಲಭಿಸಿರುತಿತ್ತು
ಎಂಬ ಯೋಚನೆ ಬರುತ್ತದೆ
ಸೂರ್ಯನ ಕುದುರೆ ಕೆನೆಯುತಿತ್ತು
ಮೋಡಗಳ ಆನೆಗಳು ಘೀಳಿಡುತ್ತಿದ್ದವು
ರಾತ್ರಿಗಳ ಸರ್ಪ
ರಾಜರುಗಳ ಆಜ್ಞೆಯನ್ನು ಘೂತ್ಕರಿಸುತ್ತಿದ್ದವು
ಆದರೆ ಅವುಗಳ ಮರೆಯಲ್ಲಿ
ನಾನು ಸಹಜವಾಗಿಯೇ ಕುಳ್ಳಿರುತ್ತಿದ್ದೆ
ಮಮತೆಯ ಬಿರುಕಿನಲ್ಲಿ ಅಡಗಿರುತ್ತಿದ್ದೆ......
ಆದರೆ ಬಹುಶಃ ಅವು ಮಲಿನ ಆಗಸದ ಕೆಳಗೆ
ಮಲಿನ ಭೂಮಿಯ ಮೇಲೆ
ಕಲ್ಲುಹಾಸಿನ ಮೇಲೆ ನಿದ್ರಿಸುವ
ಚಕಮಕಿಯ ಕಲ್ಲು ಆಗಿದ್ದವು.
ಕಲ್ಲುಗಳ ಘರ್ಷಣೆಯಿಂದ
ಬೆಂಕಿಯಂಥ ನಾನು ಹುಟ್ಟಿದೆ
–ಬೆಂಕಿಯ ಋತುವಿನಲ್ಲಿ

ಮೈಯಿಂದ ಬೆಂಕಿ ಹುಟ್ಟಿದಾಗ
ಕಲ್ಲೂ ಕಂಪಿಸಿತು
ಶಿಲೆ ಕೂಡ ಕಂಪಿಸಿತು
ಮೈಯ ಬೆಂಕಿಯನು
ಅವರು ಸೆರಗಿನಲಿ ಸುರಿದರು
ಹೊಗೆಯ ಗುಗ್ಗುಳ
ಬೆಂಕಿಯನು ನೆಕ್ಕಿತು
ಗಾಳಿಯ ದಾದಿಯೊಬ್ಬಳು
ನಕ್ಕರೆ ನಗಲಿ

ಬಸಿರಿಂದ ಬೆಸಲಾದವಳು
ಅತ್ತರೆ ಅಳಲಿ

" ಕಲ್ಲುಗಳ ಮಡಿಲಿನಲಿ
ಬೆಂಕಿ ಆಟವಾಡದಿರಲಿ
ಕಲ್ಲುಗಳ ದುಃಖವಂತೂ
ಕಲ್ಲುಗಳ ಹಾಗೆಯೇ
ಕಲ್ಲುಗಳ ನಾಲಗೆಯ ಮೇಲೆ
ಕಲ್ಲುಗಳ ಪರೆ
ನಾವು ಭೂಮಿಯ ಹಿಡಿತದಲ್ಲಿ
ನೀನು ಗಾಳಿಯ ಹಿಡಿತದಲ್ಲಿ......"
ಮತ್ತೆ ಶೂನ್ಯದ ಜಗತ್ತು
ಅವರು ಮತ್ತಿನ್ನೇನೂ ಹೇಳಲಿಲ್ಲ
ಕಣ್ಣು ಮುಚ್ಚುವ ಮುನ್ನ
ಹುಟ್ಟುತ್ತಿರುವ ಬೆಂಕಿ
ಗಾಳಿಯ ಅಲೆಯಂತೆ ಉಸಿರಾಡುವುದ ಕೂಡ
ಬಹಶಃ ನೋಡಿರಲಾರರು.........

ಬೆಂಕಿಯ ತುಟಿಗಳ ಮೇಲೆ
ದೀರ್ಘ ಉಸಿರುಗಳು ಬರೆದಿವೆ
ಬೆಂಕಿಯ ಮೂಳೆಗಳಲ್ಲಾದರೊ
ಹೊಗೆಯೋ ಹೊಗೆ

ಈ ಬೀಸುವ ಗಾಳಿ
ನನ್ನನೆಲ್ಲಿಗೆ ಕೊಂಡೊಯ್ದರೂ
ಬೆಚ್ಚನೆಯ ಬೂದಿ
ನನ್ನ ಮೈಯಿಂದ ಉದುರುತ್ತದೆ.......

ದಿನ ದಿನವು ನನ್ನ ವಯೋಮಾನ ಏರುತ್ತ ಏರುತ್ತ
ನಾನದನು ಅಪ್ಪಿಕೊಂಡಂತೆಲ್ಲ
ಅದು ಅಲ್ಲೇ ಬೂದಿಯಾಗುತ್ತದೆ........
ಹೊಗೆಯ ಗೆರೆಯ ಹಾಗೆ
ಹಣೆಯ ಮೇಲಿನ ಗೆರೆಗಳು
ಕಂಪಿಸುತ್ತವೇನು?
ತಾಯ ಬಸಿರಿನಿಂದ
ಚಿತೆಯ ಬೆಂಕಿ ಹುಟ್ಟುತ್ತದೇನು?
ಎಂದು ನನ್ನ ಯೋಚನೆ-

ನಾನು ಚಿತೆಯ ಬೆಂಕಿಯಲಿ
ಚಿತೆಯ ಬೆಂಕಿಯ ಹಾಗೆ ಜ್ವಲಿಸುವೆ
ಆದರೆ ಎಂದೋ -
ನಿದ್ರೆಯ ಕತ್ತಲೆ
ಕನಸುಗಳ ನೀಲ ಅಲೆಯಂತೆ
ಮೇಳೇಳುತ್ತದೆ.
ಚಿತೆಯ ಬೆಂಕಿ
ಬೆಂಕಿಗೆ ಅವಮಾನ
ಬಂಗಾರ ಬೆಳ್ಳಿ ಇಲ್ಲವೆ
ವಜ್ರದಲಿ ಇದ್ದ ಬೆಂಕಿಯ
ಪರಿಚಯ ನನಗಿದೆ
ಎನಿಸುತ್ತದೆ.........
ಹಾಗೂ
ಮಸಣದ ಬೆಂಕಿ ಬೆಂಕಿಯಲ್ಲ
ಬೆಂಕಿಯ ಅಪಮಾನ
-ವೆಂದೆನಿಸುತ್ತದೆ
ಈ ನನ್ನ ಬೆಂಕಿ ಕೂಡ

ಕಲ್ಲುಗಳ ನಗರದಲಿ ಇದ್ದ
ಉತ್ತರಾಧಿಕಾರದ ಬೆಂಕಿಯ
ವಾರಸುದಾರನೆಂದೇ ಅನಿಸುತ್ತದೆ.......
ಬೆಂಕಿಯ ವಾರಸುದಾರ ಬೆಂಕಿಯೇ.....

ಆದರೆ ಕಲ್ಲುಗಳ ನಗರಿಗೆ
ಬೆಂಕಿ ಹತ್ತದಿರಲಿ
ಎದೆಗಳ ಒಲೆಗಳು
ಯಾವ ಬೆಂಕಿಯನೂ ಉರಿಸದಿರಲಿ
ಹಣೆಗಳ ಭಟ್ಟಿಯಲಿ ಯಾರೂ
ಬೆಂಕಿಯನು ಕಾಯಿಸದಿರಲಿ
ಆ ಬೆಂಕಿಯ ಪೊರೆಗಳು
ನನ್ನ ನಾಲಿಗೆಯ ಮೇಲೆ ಏಳಲಿ

ಆ ಕಲ್ಲುಗಳ ನಗರದವರು–
ಈ ಬೆಂಕಿಯನು ಆರಿಸಿ ಆರಿಸಿ ಎನ್ನುತ್ತಾರೆ
ಯಾವುದಾದರೊಂದು ನೆಲಮಾಳಿಗೆಯಲ್ಲಿ
ಇದ ಹುದುಗಿಸಿ ಹುದುಗಿಸಿ
ಎನ್ನುತ್ತಾರೆ
ಕುತ್ತಿಗೆಯಲ್ಲಿ ಉಗುರುಗಳ
ಚುಚ್ಚಿ ಚುಚ್ಚಿ
ನದಿಯಲ್ಲಿ ಇದ
ಕದಡಿಬಿಡಿ ಕದಡಿಬಿಡಿ ಎನ್ನುತ್ತಾರೆ..........

ಆದರೆ ಕಲ್ಲುಗಳ ನಗರವೊಂದಿತ್ತು
ಕಲ್ಲುಗಳ ದಡದಲ್ಲಿ
ತಾಯಿಯಿಲ್ಲದ ತಬ್ಬಲಿ

ಬೆಂಕಿಯ ಶಾಖವನು
ಹಂಚಿಕೊಳ್ಳದಿರಲಿ ಯಾರೂ........

ಯಾವ ಗಾಳಿ
ತನ್ನ ಮಡಿಲಲ್ಲಿಟ್ಟು
ತುತ್ತು ತಿನ್ನಿಸಿತೊ ನನಗೆ
ಮತ್ತು ನನ್ನ ಅಮ್ಮನ ಅಮ್ಮನ
ಅಮ್ಮನನು ಹೆತ್ತಿತೋ ಅದೇ ಗಾಳಿ
ಕೈಯೊಳು ಕೆಲ ಅಕ್ಷರಗಳಂಥವನು ಹಿಡಿದುಕೊಂಡು
ಎಲ್ಲಿಂದಲೋ ಓಡಿಬಂದಿತು.........

ಇವನ್ನು ಕಪ್ಪನೆಯ ಕಿರಿ
ರೇಖೆಗಳೆಂದು ತಿಳಿಯದಿರು
ರೇಖೆಗಳ ಈ ಗುಚ್ಛ
ನಿನ್ನ ಬೆಂಕಿಯ ಜೊತೆಗಾರರು
ನೋಡು ! ಅಕ್ಷರಗಳದು ಬೆಂಕಿಯ ಜ್ವಾಲೆ
ಬೆಂಕಿಯ ಜ್ವಾಲೆ
ಬೆಂಕಿಗಿಂತ ದೊಡ್ಡದು"

ಹೀಗೆ ಹೇಳುತ್ತ
ಮುಂದೆ ನಡೆದುಬಿಟ್ಟಳು ಅವಳು
" ನಿನ್ನ ಬೆಂಕಿಯ ವಯಸ್ಸು-
ಈ ಅಕ್ಷರಗಳಿಗೆ ಹತ್ತಲಿ"

ನನ್ನ ಇತಿಹಾಸದ ಒಂದು ಪಾತ್ರ
(ಲೆನಿನ್‌ನ ಹೆಸರಿನಲ್ಲಿ !)

ನನ್ನ ಇತಿಹಾಸದ ಅದೆಂಥ ಪಾತ್ರ ನೀನು?
ನನ್ನ ಗೋಡೆಯ ಮೇಲಿನ ಕ್ಯಾಲೆಂಡರ್‌ನಿಂದ
ಹೊರಬಂದು ದಿನವೂ ಅದರ ತಾರಿಕು ಬದಲಿಸುವೆ
ಮತ್ತು ಒಂದು ಹೊಸದಿನದ ಹಾಗೆ ನನ್ನ ಸಂಧಿಸುವೆ

ಕ್ಯಾಲೆಂಡರ್‌ನಿಂದ ಹೊರಬಂದು
ರಸ್ತೆಗಳ ಮೇಲೆ ನೀನು ಸಾಗತೊಡಗಿದರೆ
ಬಿಸಿಲು ಹೊಮ್ಮುತ್ತದೆ
ಮತ್ತೆ ಎಲ್ಲೊಂದು ನಗೆಯ ಮೂಲೆ ಇದೆ
ಅಲ್ಲೆಲ್ಲ ಹಸಿರ ಎಲೆಯಂತೆ ಅದು ನಗುತ್ತದೆ
ಅಲ್ಲದೆ ಎಲ್ಲಿ ಕೊಳಕಿನ ತುಣುಕೊಂದು ಇದೆ
ಅಲ್ಲೇ ಅದು ನಾಚುತ್ತದೆ

ಇದು ನಿನ್ನ ಸಹಜ ಧರ್ಮ
ಇತಿಹಾಸಕಾದರೊ ಅಸಹಜ ಕರ್ಮ

ಭೂತಕಾಲದಲಿ ಅದು ಕುಳಿತಿತೆಂದರೆ
ಇತಿಹಾಸ ನಿರಾಳವಾಗಿ ಉಸಿರಾಡುತ್ತದೆ
ವರ್ತಮಾನದಿಂದ ಅದು ನಿವೃತ್ತವಾದರೆ
ಅದಕೆ ಇನ್ನಿಲ್ಲದ ಚಿಂತೆ

ಇಂಥ ಇತಿಹಾಸದ ಸಲುವಾಗಿ–
ಕ್ಯಾಲೆಂಡರಿನಲ್ಲಿ ನಿನ್ನ ಬಂಧಿಸಿ
ಅದರ ಮೇಲೆ ದೇಶಕಾಲಗಳ ಮುದ್ರೆಯನು ಜಡಿದು
ಮತ್ತೆ ಹಲವು ಇಸಮ್‌ಗಳ
ಮೊಳೆ ಹೊಡೆದುಬಿಟ್ಟಿದ್ದೇನೆ

ಆದರೆ ನೀನು–
ನನ್ನ ಗೋಡೆಯ ಕ್ಯಾಲೆಂಡರಿನಿಂದ ಹೊರಬಂದು
ಮತ್ತೆ ಅದರ ತಾರೀಕು ಬದಲಿಸುವೆ
ಹೊಸ ಚಿಂತೆ, ಹೊಸ ಬಿಡುಗಡೆಗಳ ಕೈಗೆತ್ತಿಕೊಂಡು
ಹೊಸ ದಿನದ ಹಾಗೆ ಸಂಧಿಸುವೆ

ನಿನ್ನ – ಒಂದು ದಿನದ– ಹಿರಿತನವೆಂದರೆ
ನನ್ನ ಅಸ್ತಿತ್ವದ ಗಾಢ ಮೂಲೆ
ನಿನ್ನ ಈ ಬಿಸಿಲ ವಾಣಿಯನು ಕೇಳಿಸಿಕೊಂಡಿತು
ಮತ್ತು ಯಾವುದು ಇತಿಹಾಸದ ಅಸಹಜ ಕರ್ಮವಾಗಿದ್ದು
ನಿನ್ನ ಸಹಜ ಕರ್ಮವೆನಿಸಿತ್ತೊ ಅದು
ನನ್ನ ಸಹಜ ಕರ್ಮವೇ ಆಗಿಬಿಟ್ಟಿತು......

* ತೃಪ್ತಾ ತಾಯಿಯ ಒಂಬತ್ತು ಕನಸುಗಳು

ಗಡಬಡಿಸಿ ಎದ್ದು ಕೂರುತೆ ತೃಪ್ತಾ ತಾಯಿ
ಲಜ್ಜೆಗೆಂಪಿನ ಹೊದಿಕೆಯಂಚನು
ಹೆಗಲ ಮೇಲೆ ಹೊದೆದಳು

ತನ್ನ ಗಂಡನತ್ತ ನೋಡುತ
ಬಿಳಿಯ ಹಾಸಿಗೆಯ ಹಾಸಿನ ಹಾಗೆ
ಹಿಂಜರಿಯುತ್ತ ಹೇಳತೊಡಗಿದಳು

ಮಾಘದ ಈ ರಾತ್ರಿಯಲ್ಲಿ
ನದಿಯಲ್ಲಿ ನಾನು ಹೆಜ್ಜೆಯಿಟ್ಟೆ

ಕೊರೆವ ಶೀತಲ ರಾತ್ರಿಯಲ್ಲಿ
ನದಿಯೊಂದು ಗುನುಗುನಿಸಿತ್ತು

ಒಂದು ಅದ್ಭುತವೇ ನಡೆದುಹೋಯಿತು
ಮೈಮೇಲೆ ನೀರು ಸರುವಿಕೊಂಡದ್ದೆ ತಡ
ಆ ನದಿ ಹಾಲಿನ ನದಿಯಾಗಿಬಿಟ್ಟಿತು

ನದಿಯದೇ ಏನೋ ಪವಾಡ
ನಾನು ಹಾಲಿನಲಿ ಮಿಂದೆ

---

* ಸಿಖ್ ಧರ್ಮದ ಸಂಸ್ಥಾಪಕ ಗುರುನಾನಕರಿಗೆ ಜನ್ಮವಿತ್ತ ಮಹಾ ಮಾತೆ

ಈ ತಲವಂಡಿಯಲ್ಲಿ ಇದೆಂಥ ನದಿ?
ಇದೆಂಥ ಕನಸು?

ನದಿಯಲ್ಲಿ ಚಂದ್ರ ಈಸುತಿದ್ದ
ಅಂಗೈಯ ಗುಟುಕು ನಿರಿನಲಿ
ಚಂದ್ರನನಿಟ್ಟುಕೊಂಡೆ

ನದಿಯ ನೀರು ನನ್ನ ರಕ್ತದಲಿ
ಮಿಳಿತವಾಗುತಿತ್ತು
ಚಂದ್ರನ ಆ ಬೆಳಕು
ನನ್ನ ಗರ್ಭದಲಿ ಅಲುಗಾಡುತಿತ್ತು

ಬಾಯಿಂದ ಹೇಳದೆಯೆ
ಫಾಲ್ಗುಣದ ಬಟ್ಟಲಲಿ
ಸಪ್ತ ವರ್ಣಗಳ ತುಂಬಲೇನು

ಗರ್ಭದಲಿ ಬಸಿರು ಗೂಡೊಂದ
ಕಟ್ಟಿದಾಗ
ಮರ್ತ್ಯ ದೇಹವಿದು ಸಂತೃಪ್ತ

ಇದೆಂಥ ತಪ?
ಇದೆಂಥ ಜಪ?

ಗರ್ಭದಲಿ ಜನನಿಗೆ
ಶಿವನ ದರ್ಶನವೆ........

ಅಪಕ್ವ ಗರ್ಭದ ಮೇಲೆ
ನನ್ನ ಮನವಾಗದಿರಲಿ

ಮಥಿಸಲು ಕುಳಿತರೆ
ಬೆಣ್ಣೆ ಅಲುಗಾಡಿದಂತೆ

ಗಡಿಗೆಯಲಿ ಕೈಹಾಕಿದರೆ
ರವಿಯ ಪೇಡೆ ಕೈಗೆ ಬಂದಿತಲ್ಲ

ಇದೆಂಥ ಭೋಗ?
ಇದೆಂಥ ಸಂಯೋಗ?

ಚೈತ್ರ ಬರುತ್ತಲೆ
ಇದೆಂಥ ಕನಸು?

ನನಗು ನನ್ನ ಗರ್ಭಕ್ಕು
ಕನಸುಗಳ ಅಂತರ

ನನ್ನ ಮನಸು ಮುದಗೊಂಡಿತಾದರೆ
ಹೃದಯ ಭಯಗೊಂಡಿತು

ವೈಶಾಖದಲಿ ಕೊಯ್ಲಿಗೆ ಬಂದ ಗೋಧಿಯ
ಹೊನ್ನಿನ ತೆನೆಯಿದೆಂಥದು?
ಮೊರದಲ್ಲಿ ಕೇರಲು ಹಾಕಿದರೆ
ಮೊರವ ತುಂಬಿದುವು ತಾರೆಗಳು.......

ಈ ಆರ್ದ್ರ ರಾತ್ರಿಯಲಿ
ಜೇಷ್ಠ ಮಾಸದಲಿ
ಇದೆಂಥ ದನಿ?

ನೆಲದಿಂದ ಮತ್ತೆ ಜಲದಿಂದ
ಎದ್ದ ನಾದವದು ಎಂಥದು?
ಮೋಹ ಮಾಯದ ಹಾಡೆ
ಅಲ್ಲದಿರೆ
ಶಿವನ ಕಾಯದ ಹಾಡೆ?

ದೈವ ಸುಗಂಧವೋ ಅಥವಾ
ನನ್ನ ನಾಭಿಯ ಗಂಧವೊ?
ಬೆಚ್ಚುತಲಿದ್ದೆ ಬೆದರುತಲಿದ್ದೆ
ಹೆದರುತಲಿದ್ದೆ
ಅದೇ ದನಿಯ ನೇರಕ್ಕೆ
ವನಗಳಲಿ ಚಲಿಸುತಲಿದ್ದೆ........

ಇದೆಂಥ ದನಿ?
ಇದೆಂಥ ಕನಸು?
ನನ್ನದೆಷ್ಟು ?
ಅನ್ಯರದೆಷ್ಟು?

ನಾನೊಬ್ಬ ಹರಿಣಿ
ಹುಚ್ಚಳಂತೇ ಆಗುತಿದ್ದೆ
ನನ್ನ ಗರ್ಭಕ್ಕೆ ಕಿವಿಯ ನಾಟಿಸಿದ್ದೆ.

ಆಷಾಢ ಮಾಸ–
ಹೂವು ಅರಳುವಂತೆ
ಹಗಲು ಏರುವಂತೆ
ಸಹಜವಾಗಿಯೇ
ತೃಪ್ತಾಳ ಕಣ್ಣು ತೆರೆದವು

"ಈ ನನ್ನ ಬದುಕು
ಯಾವ ಸರಸಿಗಳ ಜೀವನವೊ
ಆ ಸರಸಿನಲಿ ಹಂಸ ಹೋದುದ ಕಂಡೆ.

ನನ್ನ ಗರ್ಭದಲಿ ಅದರ ಗರಿಗಳು
ಅಲುಗಾಡಿದಂತೆ
ಎಚ್ಚರದಲು ಬೀಳುವ
ಕನಸು ಎಂಥದಿದು?

ನನ್ನ ಬಳಿ ಯಾವುದೇ ಮನುಷ್ಯನಿಲ್ಲ
ಮರವಿಲ್ಲ
ಅಂತಿರಲು ನನ್ನ ಜೋಳಿಯಲಿ
ತೆಂಗು ಹಾಕಿದವರಾರು?

ನಾನು ಕಾಯಿ ಒಡೆದಾಗ
ಜನ ಒಳ ತಿರುಳ ಕೊಳಲು ಬಂದರು
ಬಟ್ಟಲಲಿ ಸಪ್ಪೆ ಎಳನೀರ
ನಾ ತುಂಬಿಕೊಂಡೆ

ಗೋಮಾಳವಲ್ಲ ಗಾದೆ ಮಾತಲ್ಲ
ಬಾಗಿಲ ಬಳಿ ಬಂದವರು
ಒಂದೆರಡಲ್ಲ, ಒಬ್ಬಿಬ್ಬರಲ್ಲ
ಎಣಿಸಲಾರದಷ್ಟು ಮಂದಿ
ತೆಂಗಿನ ತಿರುಳು ಮುಗಿಯಲೇ ಇಲ್ಲ.

ಇದೆಂಥ ತೆಂಗಿನ ತಿರುಳು !
ಇದೆಂಥ ಕನಸು ?
ಕನಸುಗಳ ದಾರ
ಅದೆಷ್ಟು ಉದ್ದ !
ಇದು ಎದೆಯ ಶ್ರಾವಣ
ಎದೆಯ ಮೇಲೆ ಕೈಯಾಡಿಸಿಕೊಂಡರೆ
ಎಳನೀರು ಹಾಲಿನಂತೆ
ತೊಟ್ಟಿಕ್ಕ ಬೇಕೆ !

ಇದೆಂಥ ಭಾದ್ರಪದ?
ಇದೆಂಥ ಇಂದ್ರಜಾಲ?
ಎಲ್ಲ ಮಾತುಗಳೂ ಅದ್ಭುತ
ಈ ನನ್ನ ಬಸಿರ ಬಾಲನಿಗೆ
ಅಂಗಿ ಹೊಲಿವರಾರು?

ಇದೆಂಥ ಲಡಿಯಂತ್ರ?
ಇದೆಂಥ ಲಡಿಯು?
ನಿನ್ನೆ ಇಡೀ ರಾತ್ರಿ ಕಿರಣಗಳ
ಲಡಿಯ ನೆಯ್ದೆನೆಂಬಂತೆ..........

ಆಶ್ವಯುಜ ಮಾಸದಲಿ-
ವೈರಾಗಿ ತೃಪ್ತಳೆಚ್ಚತ್ತಳು

"ಓ ನನ್ನ ಜೀವನವೆ!
ಯಾರಿಗಾಗಿ ನೆಯ್ಯುತಿರುವೆ
ಈ ಮುದ್ದು ದಾರವನು ನೀನು?

ಮೋಹದ ತಂತಿಯಲಿ
ಸುತ್ತಲಾಗದು ಆಗಸವ
ಕಟ್ಟಲಾಗದು ಸೂರ್ಯನ

ಸತ್ಯಸಂಗತಿಯೆಂದರೆ
ಈ ಬಾಲಕನ ಅಂಗಿಯ
ಹೊಲಿಯಲಾಗದು."

ಗರ್ಭದ ಮುಂದೆ
ಶಿರಬಾಗಿ ಹೇಳಿದಳು
ಕನಸುಗಳ ಮರ್ಮವೀಗ
ತಿಳಿಯಿತು ನನಗೆ
ಇದು ನನ್ನದಲ್ಲ ಪರರದೂ ಅಲ್ಲ
ಸಾವಿನ ಜೋಗಿಯೊಬ್ಬ
ಉತ್ಸಾಹದಲೆಂಬಂತೆ ಬಂದ
ಕುಳಿತನೊಂದು ಕ್ಷಣ ಹೀಗೆ
ಗರ್ಭದ ಗುಗ್ಗುಳದ ಧೂಮ
ಕುಡಿಯಲೆಂದು ಯೋಗಿ..........

"ಓ ನನ್ನ ಜೀವನವೆ!
ಯಾರಿಗಾಗಿ ನೆಯ್ಯುತಿರುವೆ
ಈ ಮುದ್ದು ದಾರವನು ನೀನು?......

ನನ್ನ ಕಾರ್ತಿಕದ ಧರ್ಮನೆ
ನನ್ನ ಜೀವನದ ಕರ್ಮನೆ
ನನ್ನ ಗರ್ಭದ ಧೂಮವೆ
ಬೆಂಕಿ ನೂಲಿನ ದಾರವೆ

ಉರಿಯಿತು ದೇಹದ ದೀಪ
ಬೆಳಕಿನ ತೃಣ ಸೋಕಿತು ನನ್ನ
ಕರೆ ಧಾರಿಣಿಯ ದಾಯಿಯ
ಓ ನನ್ನ ಚೊಚ್ಚಲ ಕೂಸೆ.........."

ಖಾಲಿ ಜಾಗ

ಕೇವಲ ಎರಡು ರಾಜ್ಯಗಳಿದ್ದುವು–
ಒಂದು ರಾಜ್ಯ ನನ್ನನ್ನು ಮತ್ತು ಅವನನ್ನು
ಪದಚ್ಯುತಗೊಳಿಸಿತ್ತು
ಇನ್ನೊಂದನ್ನು ನಾವಿಬ್ಬರೂ ತ್ಯಜಿಸಿದ್ದೆವು

ಬೆತ್ತಲೆ ಆಗಸದ ಕೆಳಗೆ–
ನಾನು ಅದೆಷ್ಟೋ ಹೊತ್ತು
ತನುವಿನ ಮಳೆಯಲ್ಲಿ ನೆನೆಯುತಿದ್ದೆ
ಅವನು ಅದೆಷ್ಟೋ ಹೊತ್ತು
ತನುವಿನ ಮಳೆಯಲ್ಲಿ ಕರಗುತಿದ್ದ

ಆಮೇಲೆ ವರ್ಷಗಳ ಮೋಹವನು–
ಒಂದು ವಿಷದಂತೆ ಕುಡಿದು
ಕಂಪಿಸುವ ಕರಗಳಿಂದ ನನ್ನ ಕೈಹಿಡಿದ !
ಹೊರಡು ! ಕ್ಷಣಗಳ ನೆತ್ತಿಯ ಮೇಲೊಂದು
ಸೂರು ಹಾಕಿಕೊಳ್ಳೋಣ
ಅದೋ ನೋಡು ! ದೂರದಲಿ– ಅತ್ತ ಎದುರಿನಲಿ
ಸತ್ಯ ಮತ್ತು ಮಿಥ್ಯೆಗಳ ನಡುವೆ – ಒಂದಿಷ್ಟು ಖಾಲಿ ಜಾಗವಿದೆ......



ಕನ್ನಡದ ಪಂಡಿತ ಪರಂಪರೆಯ ಪ್ರತಿನಿಧಿಗಳಲ್ಲಿ ಒಬ್ಬರಾದ ಡಾ. ಆರ್ ಲಕ್ಷೀನಾರಾಯಣ ಅವರು, ಜ್ಞಾನಪೀಠದಿಂದ ಪುರಸ್ಕೃತವಾದ ಅಮೃತಾ ಪ್ರೀತಂ ಅವರ, ಈ ಕವಿತೆಗಳ ಸಂಕಲನವನ್ನು ಕನ್ನಡಕ್ಕೆ ದಕ್ಕಿಸಿಕೊಟ್ಟಿದ್ದಾರೆ. ಕವಿಯ ಆಶಯ ಮತ್ತು ಶೈಲಿ ಎರಡಕ್ಕೂ ಧಕ್ಕೆಯಾಗದ ರೀತಿಯ ಈ ಅನುವಾದವು, ಅನುವಾದಕರಾಗಿ ಇವರ ಪರಿಣತಿಗೆ ಸಾಕ್ಷಿಯಾಗಿದೆ.

ಅಮೃತಾ ಪ್ರೀತಂ ಅವರಿಗೆ ಈ ಸಂಕಲನಕ್ಕೆ 'ಜ್ಞಾನಪೀಠ' ಬಂದಾಗ ತಮ್ಮ ಕಾವ್ಯದ ವ್ಯವಸಾಯವು "ಮನುಷ್ಯರೊಳಗೆ ಮಲಗಿರುವ ದೇವತೆಗಳನ್ನು ಜಾಗೃತರನ್ನಾಗಿ ಮಾಡುವುದೇ ನನ್ನ ಕವಿತೆಗಳಲ್ಲಿ ನಾನು ಮಾಡುವ ನಿರಂತರ ಪ್ರಯತ್ನ" ಎಂದು ಹೇಳಿಕೊಂಡಿದ್ದರು.

ಅವರ ಕವಿತೆಗಳನ್ನು ಓದುತ್ತಿದ್ದರೆ, ಪ್ರೀತಂ ಅವರಿಗೆ ಪ್ರೇಮ ಮತ್ತು ಸ್ವಾತಂತ್ರ್ಯ ಎನ್ನುವ ಎರಡು ವಿಚಾರಗಳು, ಅವರು ಹೇಳುವ 'ವ್ಯವಸಾಯಕ್ಕೆ' ಮುಖ್ಯ ಸಾಧನಗಳಾಗಿ ಒದಗಿ ಬಂದಂತೆ ಕಾಣುತ್ತದೆ. ಪ್ರೇಮ ಮತ್ತು ಸ್ವಾತಂತ್ರ್ಯಗಳು ಹಲವು ವೇಳೆ ಒಂದಕ್ಕೊಂದು ಪೂರಕವಾಗಿ ವರ್ತಿಸಿದರೆ, ಇನ್ನು ಕೆಲವು ಕಡೆ ಪರಸ್ಪರ ಪ್ರತಿಬಂಧಕವಾಗಿರುತ್ತವೆ. ಈ ಪ್ರೇಮ ಮತ್ತು ಸ್ವಾತಂತ್ರ್ಯಗಳ ತೂಗುಯ್ಯಾಲೆಯು ಇವರ ಈ ಕವನಗಳ ಹಿಂದಿನ ಕೇಂದ್ರ ಜಿಜ್ಞಾಸೆಯಾಗಿ ಕಾಣುತ್ತದೆ.

ಪ್ರೇಮವು ಬಹುಮುಖ್ಯವಾಗಿ ಪ್ರೀತಂ ಅವರಿಗೆ ಹೆಣ್ಣು ಮತ್ತು ಗಂಡಿನ ಸಂಬಂಧಗಳ ಪದರಗಳನ್ನು ಸೂಕ್ಷ್ಮವಾಗಿ ಹಿಂಜಿ ಗ್ರಹಿಸುವ ಕೆಲಸದಲ್ಲಿ ತೊಡಗಿಸಿದರೆ, ಸ್ವಾತಂತ್ರ್ಯವು ಪ್ರೇಮವೂ ಸೇರಿದಂತೆ ಸಕಲ ವಿಚಾರಗಳಲ್ಲಿಯೂ ಸಾಧಿಸಬೇಕಾದ ಮೌಲ್ಯವಾಗಿ ಈ ಕವಿತೆಗಳಲ್ಲಿ ಅಭಿವ್ಯಕ್ತವಾಗಿದೆ. ಆದರಿಂದಲೇ ಪ್ರೀತಂ ಅವರಿಗೆ, ಕಾಗದ ಮತ್ತು ಕ್ಯಾನವಾಸ್‌ಗಳು ಅಭಿವ್ಯಕ್ತಿಯ 'ಚೌಕಟ್ಟು' ಹೌದು, ಚೌಕಟ್ಟನ್ನು ಮುರಿದು ಸ್ವಾತಂತ್ರ್ಯ ಮತ್ತು ಪ್ರೇಮವನ್ನು ಪಡೆಯುವ ಸಾಧನವೂ ಹೌದು.

ಹೀಗೆ ಪ್ರೀತಂ ಅವರು ಪ್ರೇಮ ಮತ್ತು ಸ್ವಾತಂತ್ರ್ಯಗಳ ಪೂರಕವೂ ಮತ್ತು ಪ್ರತಿಬಂಧಕವೂ ಆದ ಎರಡಲಗಿನ ಸಂಬಂಧದ ಸ್ವರೂಪದ ಬಗೆಗೆ ಓದುಗರನ್ನು ಜಿಜ್ಞಾಸೆಗೆ ಒಳಗು ಮಾಡುವಲ್ಲಿ ಯಶಸ್ವಿಯಾಗಿದ್ದರೆ, ಈ ವಿಚಾರದಲ್ಲಿ ಕನ್ನಡಿಗರನ್ನು ಜಿಜ್ಞಾಸೆಗೆ ಒಳಗು ಮಾಡುವಲ್ಲಿ ಪ್ರೀತಂ ಅವರಿಗೆ ದೊರಕುವ ಸಾಫಲ್ಯದಲ್ಲಿ ಅನುವಾದಕರಿಗೂ ಬಹುಶಃ ಸಮಪಾಲು ಇರುತ್ತದೆ.

ಡಾ. ಮಹೇಶ್ ಕುಮಾರ್ ಸಿ.ಎಸ್